ಜನವರಿ-ಮಾರ್ಚ್-2022

ಸಂಪುಟ : 4 ಸಂಚಿಕೆ : 1

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ


January-March 2022

# KRUSHI VANA

*Quarterly news letter*








## ಸುಭಾಷಿತ

ಬೆಂಕಿ ಕಾಡಿನ ಮಿತ್ರ ಹಾಗೂ ಶತ್ರು ಎರಡೂ ಹೌದು. "ಕಾಡಿಗೆ ನಿಯಂತ್ರಿತ ಮೇಲ್ಮೈ ಬೆಂಕಿ ಮಿತ್ರ ಹಾಗೂ ಕಾಡ್ಗಿಚ್ಚು ಅದರ ಶತ್ರು".


# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

Volume: 4 Issue: 1

ಸಂಪುಟ: 4 ಸಂಚಿಕೆ: 1



## ಸಂಪಾದಕೀಯ ಮಂಡಳಿ

**ಗೌರವ ಸಂಪಾದಕರು**

ಡಾ. ಎಸ್.ಸಿ.ವಿ. ರೆಡ್ಡಿ, ಎಂ.ಡಿ, ಕೆ.ಎಸ್.ಎಸ್.ಸಿ.ಎ(ನಿ)

**ಸಂಪಾದಕರು**

ಶ್ರೀ ಅಜಯ್ ಮಿಶ್ರ,ಭಾ.ಅ.ಸೇ(ನಿ)

**ಸಹ ಸಂಪಾದಕರು**

ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

**ಸದಸ್ಯರು**

ಶ್ರೀ ಎ.ಎಂ. ಅಣ್ಣಯ್ಯ, ಭಾ.ಅ.ಸೇ(ನಿ)

ಶ್ರೀ ಎ. ಅಶ್ವಥಯ್ಯ, ಉ.ಅ.ಸಂ(ನಿ)

ಡಾ. ಎ.ಬಿ. ಪಾಟೀಲ್, ರಿಜಿಸ್ಟ್ರಾರ್(ನಿ)

ಶ್ರೀ ಎನ್. ಶಿವರಾಜು, ಉ.ಅ.ಸಂ(ನಿ)

ಶ್ರೀ ಆರ್. ಆಂಜನೇಯರೆಡ್ಡಿ, ಪ್ರಗತಿಪರ ರೈತರು

ಶ್ರೀ ಮಲ್ಲೇಶ್ ಅಂಗಾಚಾರ್, ತಂತ್ರಜ್ಞರು



## ಕಚೇರಿ ವಿಳಾಸ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)

ವನವಿಕಾಸ, ನೆಲಮಹಡಿ,

18ನೇ ಅಡ್ಡರಸ್ತೆ, ಮಲ್ಲೇಶ್ವರಂ,

ಬೆಂಗಳೂರು–560003

ದೂ: 080 23566126

Email: iaftbangalore@gmail.com

WWW.iaft.co.in


## ಮನವಿ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಕೃಷಿ ಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಹಾಗೂ ನಿವೃತ್ತ ಅಧಿಕಾರಿಗಳು, ಪ್ರಗತಿಪರ ರೈತರು ಹಾಗೂ ಕೃಷಿ ವಿಶ್ವ ವಿದ್ಯಾನಿಲಯದ ಹಾಲಿ ಹಾಗೂ ನಿವೃತ್ತ ಉಪ ಕುಲಪತಿಗಳು, ಪ್ರಾಧ್ಯಾಪಕರು, ರೈತರು ಸದಸ್ಯರಾಗಿರುತ್ತಾರೆ. ಈ ಹಿರಿಯ ಹಾಗೂ ಅನುಭವಿ ತಜ್ಞರಿಂದ ಸರ್ಕಾರ, ಅರಣ್ಯ ಇಲಾಖೆ ಹಾಗೂ ರೈತರ ನಡುವೆ ಕೃಷಿ ಅರಣ್ಯ ಬೆಳೆಸುವಲ್ಲಿ ಸಲಹೆ ಸಹಕಾರ ನೀಡಲಾಗುತ್ತಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಸಂಸ್ಥೆಯ ಜಾಲತಾಣ (www.iaft.co.in)ದಲ್ಲಿರುವ ಅರ್ಜಿ ನಮೂನೆಯ ಪ್ರತಿಯನ್ನು ಪಡೆದು ಸದಸ್ಯತ್ವ ಶುಲ್ಕವನ್ನು IAFTಯ ಈ ಕೆಳಗಿನ ಅಕೌಂಟ್‌ಗೆ ಚೆಕ್/ಡಿಡಿ/NEFT ಮಾಡಲು ಕೋರಿದೆ. ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: CNRB0010424

**ಹೆಚ್.ಜಿ. ಶಿವಾನಂದಮೂರ್ತಿ**
ಕಾರ್ಯದರ್ಶಿ

## ಪರಿವಿಡಿ


| | ಲೇಖನ | ಪುಟ |
|---|---|---|
| 1 | ಕೃಷಿಅರಣ್ಯದ ನೀತಿ ಅಭಿವೃದ್ಧಿಪಡಿಸುವುದು, ಇದರ ಸ್ಥಾನಮಾನ ಮತ್ತು ಮುಂದಿನ ಹಾದಿ (ಸಂಪಾದಕೀಯ) | 4 |
| 2 | ಹೆಬ್ಬೇವು (Melia dubia) | 5 |
| 3 | ಕೃಷಿ ಭೂಮಿಯಲ್ಲಿ ಶ್ರೀಗಂಧ – ಇಲ್ಲೊಂದಷ್ಟು ಸತ್ಯ | 6 |
| 4 | ಕೃಷಿ ಭೂಮಿಯಲ್ಲಿ ಸಾಗುವಾನಿ (TEAK) | 8 |
| 5 | ಕಾಡು ಮತ್ತು ಕೃಷಿಕಾಡಿನಲ್ಲಿ ಬೆಂಕಿ ನಿರ್ವಹಣೆ | 11 |



## ಜಾಹೀರಾತು ವಿವರಗಳು

ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ಈ ಕೆಳಗಿನ ದರಗಳನ್ನು ನಿಗದಿ ಮಾಡಿದೆ. ಜಾಹೀರಾತು ನೀಡಲು ಕೋರಿದೆ.

| ಕ್ರ.ಸಂ | ವಿಸ್ತೀರ್ಣ | ಕಪ್ಪು–ಬಿಳುಪು ದರ (ರೂ.ಗಳಲ್ಲಿ) | ವರ್ಣಮಯ ದರ (ರೂ.ಗಳಲ್ಲಿ) | ಅವಧಿ |
|---|---|---|---|---|
| 1 | 1/4 ಪುಟ | 2500/– | 5000/– | 1 ವರ್ಷ |
| 2 | 1/2 ಪುಟ | 5000/– | 10000/– | 1 ವರ್ಷ |
| 3 | 1 ಪುಟ | 10000/– | 20000/– | 1 ವರ್ಷ |



Publisher: IAFT, Editor (ಸಂಪಾದಕರು): Ajay Misra, IFS (Retd), KRUSHI VANA, Quarterly News Letter, January-March-2022 | Volume: 4

Printed By: S.K. Chandrashekar, Rathna Offset Printers, #120, 1st Main Road, Cauvery Nadhi Road, Brindavana Nagar, Bangalore-560019 | Issue: 1

ಸಂಪಾದಕೀಯ...

# ಕೃಷಿಅರಣ್ಯದ ನೀತಿ ಅಭಿವೃದ್ಧಿಪಡಿಸುವುದು, ಇದರ ಸ್ಥಾನಮಾನ ಮತ್ತು ಮುಂದಿನ ಹಾದಿ



**ಶ್ರೀ ಅಜಯ್ ಮಿಶ್ರ**, ಭಾ.ಅ.ಸೇ (ನಿ)
ಸಂಪಾದಕರು

ಕೃಷಿಅರಣ್ಯವು ಬಹಳ ಪುರಾತನ ಕಾಲದ ಪದ್ಧತಿಯಾಗಿದ್ದು ಕೃಷಿ ಬೆಳೆಗಳೊಂದಿಗೆ ಮರಗಳನ್ನು ಬೆಳೆಸುವುದು ಸಮಗ್ರ ಕೃಷಿ ಪದ್ಧತಿಯ ಅವಿಭಾಜ್ಯ ಅಂಗವಾಗಿದೆ. ಇದರಿಂದ ರೈತರಿಗೆ ಅನೇಕ ರೀತಿಯಲ್ಲಿ ಲಾಭಗಳುಂಟಾಗಲಿದೆ. ರೈತರ ಆದಾಯವನ್ನು ಹೆಚ್ಚಿಸುವುದರ ಜೊತೆಗೆ ಹವಾಮಾನದಲ್ಲಿ ಉಂಟಾಗಿರುವ ಬದಲಾವಣೆಯನ್ನು ನಿಯಂತ್ರಿಸುವುದಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಅರಣ್ಯದ ಹೊರಗಡೆ ಮರಗಳ ಹೊದಿಕೆಯು ದಾಖಲೆಯಲ್ಲಿರುವ ಅರಣ್ಯ ಪ್ರದೇಶಗಳಿಗಿಂತ ಹೆಚ್ಚಾಗಿದೆ. ಇದನ್ನು 2021ರ ಭಾರತದ ಅರಣ್ಯಗಳ ಸ್ಥಿತಿಯ ವರದಿ (ISFR)ಯಲ್ಲಿ ವರದಿಸಲಾಗಿದೆ. ಇದನ್ನು ಗಮನಿಸಿದಾಗ ಪರಿಸರದಲ್ಲಿ ಸ್ಥಿರತೆ ಮತ್ತು ಸಮತೋಲನವನ್ನು ಕಾಯ್ದುಕೊಳ್ಳಲು ಹಾಗೂ ಕೃಷಿಯಲ್ಲಿ ಸುಸ್ಥಿರತೆಯನ್ನು ತಂದುಕೊಳ್ಳಲು ನಮ್ಮ ಮುಂದಿನ ಮಾರ್ಗವೆಂದರೆ ದಾಖಲೆಯ ಅರಣ್ಯಗಳ ಹೊರಗಡೆ ಮರಗಳ ಹೊದಿಕೆಯನ್ನು ಹೆಚ್ಚಿಸಬೇಕಿದೆ. ಇದನ್ನು ಸಾಧಿಸಲು ಇರುವ ಏಕೈಕ ಮಾರ್ಗವೆಂದರೆ ಕೃಷಿಅರಣ್ಯಗಳನ್ನು ಹೆಚ್ಚು ಹೆಚ್ಚು ಬೆಳೆಸುವುದಾಗಿದೆ. ಆದರೆ ಸಧ್ಯದ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಕೃಷಿಅರಣ್ಯ ಬೆಳೆಸಲು ಯಾವುದೇ ನೀತಿ ನಿಯಮಗಳಿಲ್ಲದೇ ಇರುವುದರಿಂದ ರೈತರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಹೋಗಲಾಡಿಸಲು, ರಾಜ್ಯದಲ್ಲಿ ತುರ್ತಾಗಿ ಕೃಷಿಅರಣ್ಯದ ನೀತಿಯನ್ನು ಜಾರಿಗೆ ತರಬೇಕಿದೆ. ಶ್ರೀಗಂಧದ ಮರವು ರಾಜ್ಯದ ಕೃಷಿಅರಣ್ಯದಲ್ಲಿ ಬೆಳೆಸುತ್ತಿರುವ ಬಹು ಮುಖ್ಯ ಜಾತಿಯ ಮರವಾಗಿದೆ. ರಾಜ್ಯ ಸರ್ಕಾರವು ಶ್ರೀಗಂಧ ಬೆಳೆಸುವುದು, ರಕ್ಷಣೆ, ಕಟಾವು, ಮರದ ಪರಿವರ್ತನೆ ಮತ್ತು ಮಾರುಕಟ್ಟೆ ಬಗ್ಗೆ ನೀತಿಯನ್ನು ಹೊರತರುವ ಕ್ರಮ ಕೈಗೊಂಡಿರುವುದು ಸ್ವಾಗತಾರ್ಹ ಹೆಜ್ಜೆಯಾಗಿರುತ್ತದೆ.

ರಾಷ್ಟ್ರೀಯ ಕೃಷಿಅರಣ್ಯಗಳ ನೀತಿಯಲ್ಲಿ ಬರುವ ಸಬ್ ಮಿಶನ್‌ನ ಮೊದಲು ಆದ್ಯತೆಯು ಷರತ್ತಾಗಿ ಕೃಷಿಅರಣ್ಯಗಳಲ್ಲಿ ಬೆಳೆದ ಮರಗಳ ಕಟಾವಣೆಯನ್ನು ಸರಳೀಕರಣಗೊಳಿಸುವುದಾಗಿದೆ ಹಾಗೂ ಕೃಷಿಅರಣ್ಯಗಳ ಉತ್ಪಾದನೆ, ಸಾಗಾಟಕ್ಕೆ ನಿಯಮಗಳನ್ನು ಆಯಾ ರಾಜ್ಯಗಳು ರೂಪಿಸಬೇಕಿದೆ. ದಿನಾಂಕ:07/12/2016ರ ಸರ್ಕಾರದ ಅಧಿಸೂಚನೆಯಂತೆ 42 ಜಾತಿಯ ಮರಗಳ ಸಾಗಾಣಿಕೆಗೆ 1969 ಕರ್ನಾಟಕ ಅರಣ್ಯ ನಿಯಮಗಳಡಿ ವಿನಾಯ್ತಿ ನೀಡಲಾಗಿದೆ ಹಾಗೂ 26 ಜಾತಿಯ ಮರಗಳಿಗೆ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ರ ಪ್ರಕಾರ 26 ಜಾತಿಯ ಮರಗಳಿಗೆ ವಿನಾಯತಿ ನೀಡಲಾಗಿದೆ. ಒಟ್ಟಾರೆಯಾಗಿ 21 ಜಾತಿಯ ಮರಗಳ ಕಟಾವಣೆ ಮತ್ತು ಸಾಗಾಣಿಕೆಗೆ ವಿನಾಯತಿ ನೀಡಲಾಗಿದೆ. ಕರ್ನಾಟಕ ಅರಣ್ಯ ಇಲಾಖೆಯು 2020ನೇ ಸಾಲಿನಲ್ಲಿ ಸರ್ಕಾರಕ್ಕೆ ಕೃಷಿ ಭೂಮಿಯಲ್ಲಿ ಬೆಳೆದ ಮರಗಳ ಕಟಾವಣೆ ಮತ್ತು ಸಾಗಾಣಿಕೆಗೆ ಹೆಚ್ಚಿನ ಜಾತಿಯ ಮರಗಳಿಗೆ ವಿನಾಯತಿ ನೀಡುವಂತೆ ಪ್ರಸ್ತಾವನೆ ಸಲ್ಲಿಸಿದೆ. ಇದರಿಂದ ಕೃಷಿ ಭೂಮಿಯಲ್ಲಿ ಮರಗಳನ್ನು ಬೆಳೆಸುವಂತೆ ಉತ್ತೇಜಿಸುವ ಸಲುವಾಗಿ ಈಗಿರುವ ಕಾನೂನುಗಳಿಗೆ ತಿದ್ದುಪಡಿ ತರುವುದು ಅತ್ಯಾವಶ್ಯಕವಾಗಿದೆ.

ಕೃಷಿಅರಣ್ಯದ ಉಪ ಮಿಶನ್‌ನ ಮತ್ತೊಂದು ಪ್ರಮುಖ ಗುರಿಯು ಗುಣಮಟ್ಟದ ಸಸಿಗಳ ಪೂರೈಕೆಯಾಗಿರುತ್ತದೆ. ಇದರಲ್ಲಿ ಹೈ ಟೆಕ್ ಸಸ್ಯಕ್ಷೇತ್ರಗಳ ಸ್ಥಾಪನೆಗೆ ಒತ್ತು ನೀಡಲಾಗಿದೆ. ಈಗ ಲಭ್ಯವಿರುವ ಗುಣಮಟ್ಟದ ಸಸಿಗಳ ಪ್ರಮಾಣವು ತುಂಬಾ ಕಡಿಮೆಯೆನಿಸುವುದು. ಇಲ್ಲಿ ಖಾಸಗಿ ಅರಣ್ಯ ಸಸ್ಯಕ್ಷೇತ್ರಗಳಲ್ಲಿ ಬೆಳೆದ ಅರಣ್ಯ ಜಾತಿ ಸಸಿಗಳನ್ನು ಪ್ರಮಾಣೀಕರಿಸುವುದು ಮತ್ತು ಗುಣಮಟ್ಟದ ನಿಯಂತ್ರಣವನ್ನು ರಾಷ್ಟ್ರೀಯ ತೋಟಗಾರಿಕಾ ಮಿಶನ್/ರಾಷ್ಟ್ರೀಯ ಬಿದಿರಿನ ಮಿಶನ್‌ಗಳಿಂದ ಹೊರಗಿಡಲಾಗಿದೆ. ಆದರೆ ಈ ಒಂದು ನಿಯಂತ್ರವನ್ನು ಎನ್.ಹೆಚ್.ಎಮ್ / ಎನ್.ಬಿ.ಎಮ್ ಅಡಿ ತರುವುದು ಸೂಕ್ತವಾಗಿದೆ ಹಾಗೂ ಅಂಗಾಂಶ ಕಸಿ ವಿಧಾನದಿಂದ (ಟಿಶ್ಯುಕಲ್ಚರ್) ಬೆಳೆಸಿದ ಬಿದಿರಿನ ಸಸಿಗಳ ಪ್ರಮಾಣೀಕರಿಸುವುದನ್ನು ಸಹ ಇವುಗಳ ನಿಯಂತ್ರಣದಲ್ಲಿ ತರುವುದು ಸೂಕ್ತವಾಗಿದೆ. ಕೃಷಿಅರಣ್ಯಗಳಲ್ಲಿ ಮರಗಳನ್ನು ಬೆಳೆಸಲು ಬಳಸುವ ಮರಗಳ ಬೀಜಗಳನ್ನು ಪ್ರಮಾಣೀಕರಿಸುವುದನ್ನು 1966ರ ಕೇಂದ್ರ ಬಿಂದು ಕಾನೂನಿನಡಿ ಮತ್ತು 1968ರ ಬೀಜಗಳ ನಿಯಮಗಳ ಸೆಕ್ಷನ್ 2(1)ಕ್ಕೆ ಸೂಕ್ತ ತಿದ್ದುಪಡಿ ತಂದು ಕೃಷಿಅರಣ್ಯಗಳಲ್ಲಿ ಬೆಳೆಸುವ ಎಲ್ಲಾ ಜಾತಿಯ ಮರಗಳ ಬೀಜಗಳನ್ನು ಕೃಷಿ ಬೆಳೆಯ ಬೀಜಗಳಂತೆ ನಿಯಂತ್ರಿಸುವುದು ಸೂಕ್ತವಾಗಿದೆ.

ಕೃಷಿ ಬೆಳೆಗಿರುವ ಸಾಲದ ಪದ್ಧತಿ ಮತ್ತು ವಿಮೆಯನ್ನು ಕೃಷಿಅರಣ್ಯಕ್ಕೂ ಸಹ ಅನ್ವಯಿಸುವುದರಿಂದ, ದೇಶದಲ್ಲಿ ಮರಗಳ ಉತ್ಪನ್ನಗಳು ಆಮದಾಗುವುದನ್ನು ಕಡಿಮೆಗೊಳಿಸಿ, ಕೃಷಿಅರಣ್ಯಗಳ ಉತ್ಪನ್ನಗಳ ರಫ್ತಿಗೆ ಹೆಚ್ಚಿನ ಒತ್ತನ್ನು ನೀಡಬೇಕಾಗಿರುತ್ತದೆ.

ಈಗ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಮಾರಾಟಕ್ಕಿರುವಂತೆ ಸಾಂಸ್ಥಿಕ ಮಾರುಕಟ್ಟೆ ವ್ಯವಸ್ಥೆಯನ್ನು ಕೃಷಿಅರಣ್ಯಗಳ ಉತ್ಪನ್ನಗಳಿಗೂ ಕಲ್ಪಿಸುವುದು ಅತ್ಯಾವಶ್ಯಕವಾಗಿದೆ. ಕೇಂದ್ರದ ಅರಣ್ಯ ಮಂತ್ರಾಲಯವು ತಿದ್ದುಪಡಿಯೊಂದಿಗೆ ದಿನಾಂಕ: 11/09/2017ರ ಮಾರ್ಗಸೂಚಿಯಲ್ಲಿ ಮರ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ, ಸಾಮಿಲ್ಸ್ ಸ್ಥಾಪನೆಗೆ ಸರಳೀಕರಣಗೊಳಿಸಿದೆ ಹಾಗೂ ಕೃಷಿಅರಣ್ಯಗಳಲ್ಲಿ ಉತ್ಪಾದಿಸುವ ಮರಗಳು ಮತ್ತು ಉತ್ಪನ್ನಗಳಿಗೂ ಸಹ ಕೃಷಿ ಬೆಳೆಯೆಂದು ಪರಿಗಣಿಸಿ ಸಾಗಾಣಿಕೆ ಮತ್ತು ಕಟಾವಣೆಗೆ ವಿನಾಯತಿ ನೀಡುವುದು ಸೂಕ್ತವಾಗಿದೆ. ಇದರಿಂದ ಹೆಚ್ಚು ಹೆಚ್ಚು ಮರ ಆಧಾರಿತ ಕೈಗಾರಿಕೆಗಳು ಅಲ್ಲಲ್ಲೇ ಸ್ಥಾಪನೆಯಾಗುವುದರಿಂದ ಕೃಷಿಅರಣ್ಯದ ವಸ್ತುಗಳ ಸಾಗಾಣಿಕೆಗೆ ಅನುಕೂಲವಾಗುವುದರ ಜೊತೆಗೆ ಸ್ಥಳೀಯರು ಹೆಚ್ಚಿನ ಬೆಲೆಯನ್ನು ಪಡೆಯಲು ಸಹಕಾರಿಯಾಗುವುದು. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಕೃಷಿ ಅರಣ್ಯಗಳಿಂದ ದೊರೆಯುವ ಕಚ್ಚಾ ವಸ್ತುಗಳನ್ನು ಅಂದಾಜಿಸಲು ಮತ್ತು ಯಾವ ಜಾತಿಯ ಮರಗಳಿಂದ ಎಷ್ಟು ಉತ್ಪನ್ನ ದೊರೆಯುವುದೆಂದು ಮತ್ತು ಇದರಿಂದ ಸುಸ್ಥಿರವಾದ ರೀತಿಯಲ್ಲಿ ಅರಣ್ಯಗಳ ಹೊರಗಡೆ ಬೆಳೆದಿರುವ ಮರಗಳನ್ನು ಕಟಾವು ಮಾಡಲು ಸಹಾಯಕವಾಗುವುದು. ಈ ನಿಟ್ಟಿನಲ್ಲಿ ‘ಇ ಮಾರುಕಟ್ಟೆ’ ವ್ಯವಸ್ಥೆಯನ್ನು ಕೃಷಿಅರಣ್ಯಗಳ ಉತ್ಪನ್ನಗಳಿಗೂ ಕಲ್ಪಿಸಬೇಕಿದೆ.

ಇದಕ್ಕೆ ಪೂರಕವಾಗಿ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯನ್ನು ಸ್ಥಳೀಯವಾಗಿ ಸ್ಥಾಪನೆಗೊಂಡಿರುವ ರೈತ ಉತ್ಪಾದನೆ ಸಂಸ್ಥೆಯೊಂದಿಗೆ (FPO) ಅಭಿವೃದ್ಧಿ ಪಡಿಸುವ ಅವಶ್ಯಕತೆಯಿದೆ. ಪುಟ ೯ಕ್ಕೆ...

## ಕೃಷಿಅರಣ್ಯ ಸಂಸ್ಥೆಯ ಸದಸ್ಯತ್ವ

| ಸದಸ್ಯತ್ವದ ವಿವರ | ಶುಲ್ಕ (ರೂ.) |
|---|---|
| ಸಂಸ್ಥೆ ಸದಸ್ಯತ್ವ | 25,000.00 |
| ಪೋಷಕ ಸದಸ್ಯತ್ವ | 20,000.00 |
| ಅಜೀವ ಸದಸ್ಯತ್ವ | 5,000.00 |
| ಸಹ ಸದಸ್ಯತ್ವ | 2,000.00 |
| ಸಾಮಾನ್ಯ ಸದಸ್ಯತ್ವ (ಕೃಷಿಕರಿಗೆ) | 100.00 |

# ಹೆಬ್ಬೇವು (Melia dubia)

**ಹೆಚ್.ಜಿ. ಶಿವಾನಂದಮೂರ್ತಿ**, ಭಾ.ಅ.ಸೇ (ನಿ) ಕಾರ್ಯದರ್ಶಿ, ಮೊ: 94481 26246

ಹೆಬ್ಬೇವು (Melia dubia) ಇತ್ತೀಚಿನ ವರ್ಷಗಳಲ್ಲಿ ಮನೆ ಮಾತಾಗಿರುವ ಹಾಗೂ ಸಾರ್ವಜನಿಕವಾಗಿ ಮನ್ನಣೆ ಪಡೆದ ಮರವಾಗಿದೆ. ಹಿಂದಿನಿಂದಲೂ ಈ ಮರಗಳನ್ನು ತೋಟಗಳ ಬೇಲಿ ಸಾಲುಗಳಲ್ಲಿ, ಬದುಗಳ ಮೇಲೆ ಅಲ್ಲಲ್ಲೇ ತೇವಾಂಶ ಹೆಚ್ಚಿರುವ ಕಡೆಗಳಲ್ಲಿ ಬೆಳೆಯಲಾಗುತ್ತಿತ್ತು. ಆದರೆ ಇದನ್ನು ಈಗ ಏಕ ಬೆಳೆಯಾಗಿ ಚಾಮರಾಜನಗರ ಜಿಲ್ಲೆಯಾದ್ಯಂತ, ಅದರಲ್ಲೂ ವಿಶೇಷವಾಗಿ ಕೊಳ್ಳೆಗಾಲ ಹಾಗೂ ರಾಮನಗರ ಜಿಲ್ಲೆಯಲ್ಲಿ, ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಮತ್ತು ಬಿಳಿಗಿರಿರಂಗನ ಬೆಟ್ಟದ ತಪ್ಪಲು ಪ್ರದೇಶದಲ್ಲಿ ಅತೀ ಹೆಚ್ಚಾಗಿ ರೈತರ ಜಮೀನುಗಳಲ್ಲಿ ಬೆಳೆಯಲಾಗುತ್ತಿದೆ. ಈ ಮರವು ಅತೀ ವೇಗವಾಗಿ ಬೆಳೆಯುವ ಮರಗಳಲ್ಲೊಂದಾಗಿದ್ದು, ನೇರವಾಗಿ ಬೆಳೆಯುವುದು ಮತ್ತು ಭೂಮಿಯಿಂದ 10 ಅಡಿಗೂ ಎತ್ತರದಲ್ಲಿ ರೆಂಬೆಗಳು ಹರಡಿಕೊಳ್ಳುವುದರಿಂದ, ಮೊದಲ ಕೆಲವು ವರ್ಷಗಳಲ್ಲಿ ಅಂತರ ಬೇಸಾಯ ಮಾಡಲು ಮತ್ತು ಕೃಷಿ ಬೆಳೆ ಬೆಳೆಯಲು ಅನುಕೂಲಕರವಾಗಿದೆ. ಈ ಮರವು ರಾಜ್ಯದ ಮಲೆನಾಡು ಭಾಗದಲ್ಲಿ, ಅರೆ ಮಲೆನಾಡು ಪ್ರದೇಶ ಹಾಗೂ ಮೈದಾನ ಪ್ರದೇಶದ ನೀರಾವರಿ ಸೌಲಭ್ಯವಿರುವ ಎಲ್ಲಾ ಕಡೆಗಳಲ್ಲಿ ಬೆಳೆಯಲಾಗುತ್ತಿದೆ.

**ಬೆಳೆಸುವ ವಿಧಾನ:** ತೇವಾಂಶ ಹೆಚ್ಚಿರುವ ಆಳವಾದ ಮಣ್ಣಿನಲ್ಲಿರುವ ಕೆಂಪು ಹಾಗೂ ಕಪ್ಪು ಭೂಮಿಯಲ್ಲಿ ಚೆನ್ನಾಗಿ ಬೆಳೆಯುತ್ತದೆ. ಬರಡು ಭೂಮಿಯಲ್ಲಿ ಹಾಗೂ ಒಣ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯಲಾರದು. ಬಹಳಷ್ಟು ಸಂದರ್ಭಗಳಲ್ಲಿ ಒಣ ಹಾಗೂ ಕಡಿಮೆ ಆಳದ ಮಣ್ಣಿನಲ್ಲಿ ಏಕಬೆಳೆಯಾಗಿ ಬೆಳೆಯಲು ಪ್ರಯತ್ನಿಸಿ ವಿಫಲವಾಗಿರುತ್ತಾರೆ. ಈ ಮರವನ್ನು ತೋಟದ ಹಾಗೂ ನೀರಾವರಿ ಸೌಲಭ್ಯವಿರುವ ಜಮೀನಿನ ಸುತ್ತಲೂ 15 ರಿಂದ 20 ಅಡಿ ಅಂತರದಲ್ಲಿ ಬೆಳೆಯುವುದು ಸೂಕ್ತವಾಗಿದೆ. ಸಸಿಗಳನ್ನು ಮಳೆಗಾಲದ ಪೂರ್ವದಲ್ಲಿ 2 ಅಡಿ ಆಳದ ಗುಂಡಿಗಳಲ್ಲಿ ಕೊಟ್ಟಿಗೆ ಗೊಬ್ಬರದ ಸಮೇತ ನಾಟಿ ಮಾಡುವುದು ಸೂಕ್ತವಾಗಿರುತ್ತದೆ. ನಾಟಿ ಮಾಡಿದ ಒಂದೇ ವರ್ಷದಲ್ಲಿ 6 ರಿಂದ 8 ಅಡಿ ಎತ್ತರಕ್ಕೆ ನೇರವಾಗಿ ಬೆಳೆಯುತ್ತದೆ.

ಹೆಬ್ಬೇವಿನ ಸೊಪ್ಪು ಕುರಿ, ಮೇಕೆ ಹಾಗೂ ದನಕರುಗಳಿಗೆ ಒಳ್ಳೆಯ ಪೌಷ್ಟಿಕ ಮೇವು, ಮರಗಳಿಂದ ಉದುರುವ ಎಲೆ, ಕಡ್ಡಿಗಳಿಂದ 3 ರಿಂದ 4 ವರ್ಷಗಳಲ್ಲಿ ಮರಗಳಿರುವ ಪ್ರದೇಶದಲ್ಲಿ ಭೂಮಿಯಲ್ಲಿ ಹೆಚ್ಚಿನ ಸಾವಯವ ಅಂಶ ಸೇರ್ಪಡೆಗೊಂಡು ಫಲವತ್ತತೆ ಹೆಚ್ಚಾಗುವುದು. ಏಕಬೆಳೆಯಾಗಿ ಬೆಳೆಯುವರು. ಎರಡು ವರ್ಷಗಳ ನಂತರದಲ್ಲಿ ಕರಿ ಮೆಣಸಿನ ಬಳ್ಳಿಯನ್ನು ಹೆಚ್ಚಿಸಬಹುದು. ಮರಗಳ ಬೆಳವಣಿಗೆಯು ಭೂಮಿಯ ಫಲವತ್ತತೆ ಮೇಲೆ ಅವಲಂಬಿತವಾಗಿರುತ್ತದೆ.

ಬಲಿತ ಮರವು ಎರಡನೇ ದರ್ಜೆಯ ಉಪಯುಕ್ತವಾದ ಟಿಂಬರ್ ನೀಡುವುದು. ಇದನ್ನು ಹೆಚ್ಚಾಗಿ ಪ್ಲೈವುಡ್ ತಯಾರಿಸಲು, ಮ್ಯಾಚ್‌ವುಡ್, ಸೀಲಿಂಗ್‌ಗಾಗಿ ಹಾಗೂ ಪ್ಯಾಕಿಂಗ್ ಕೇಸ್‌ಗಳಾಗಿ, ದೋಣಿ ತಯಾರಿಸಲು ಸಂಗೀತದ ಉಪಕರಣಗಳ ತಯಾರಿಕೆಯಲ್ಲಿ, ಮನೆಯ ಒಳಾಂಗಣ ಸೌಂದರ್ಯ ವರ್ಧಿಸಲು ಬಳಸಲಾಗುತ್ತಿದೆ. ಈ ಮರದ ಬೀಜಗಳಿಂದ ಬಯೋಡೀಸೆಲ್ ತಯಾರಿಸಬಹುದಾಗಿದ್ದು, ಗಗನಕ್ಕೇರುತ್ತಿರುವ ಪೆಟ್ರೋಲಿಯಂ ಉತ್ಪಾದನೆಗಳ ಬದಲಿಗೆ ಬಳಸಲು ಯೋಚಿಸಬಹುದು. ಈ ಮರವು ಡಿಸೆಂಬರ್, ಜನವರಿ ಹಾಗೂ ಫೆಬ್ರವರಿ ತಿಂಗಳುಗಳಲ್ಲಿ ಸಂಪೂರ್ಣವಾಗಿ ಎಲೆಗಳನ್ನು ಉದುರಿಸುವುದು, ಹೊಸ ಚಿಗುರು ಮತ್ತು ಹೂವುಗಳು ಮಾರ್ಚ್ ನಂತರ ಬಂದು ಅಕ್ಟೋಬರ್ ನಿಂದ ಜನವರಿ ತಿಂಗಳೊಳಗೆ ಹಣ್ಣುಗಳು ಬಲಿಯುತ್ತವೆ.

ಸ್ವಾಭಾವಿಕವಾಗಿ ಈ ಮರವು ಎಲೆಯುದುರುವ ತೇವಾಂಶಭರಿತ, ಅರೆ ನಿತ್ಯ ಹರಿದ್ವರ್ಣ ಹಾಗೂ ನಿತ್ಯ ಹರಿದ್ವರ್ಣದ ಅರಣ್ಯಗಳಲ್ಲಿ ಕಂಡುಬರುವುದು.

ಅತೀ ಕಡಿಮೆ ಸಮಯದಲ್ಲಿ ರೈತರು ಏಕ ಬೆಳೆಯಾಗಿ ಬೆಳೆದು ಹೆಚ್ಚಿನ ಲಾಭ ಗಳಿಸುತ್ತಿದ್ದರು. ಇದನ್ನು ಹೆಚ್ಚಾಗಿ ಪ್ಲೈವುಡ್ ತಯಾರಿಕೆಗಾಗಿ ಬಳಸುತ್ತಿರುವುದರಿಂದ, ಇತ್ತೀಚಿನ ವರ್ಷಗಳಲ್ಲಿ ಈ ಮರಕ್ಕೆ ಬೇಡಿಕೆ ಸ್ವಲ್ಪ ಕಡಿಮೆಯಾಗಿರುತ್ತದೆ. ಬಲಿತ ಮರಗಳು ನಸುಗೆಂಪಿನ ಮತ್ತು ತೆಳು ಹಳದಿ ಬಣ್ಣದ ಚೌಬೀನೆಯನ್ನೂ ನೀಡುವುದರಿಂದ, ಈ ಮರದ ಮೌಲ್ಯವರ್ಧನೆಗೆ ಹೆಚ್ಚಿನ ಆಸಕ್ತಿ ವಹಿಸಲು ಕೈಗಾರಿಕೋದ್ಯಮಿಗಳು ಮತ್ತು ಟಿಂಬರ್ ವ್ಯಾಪಾರಿಗಳು ಮನಸ್ಸು ಮಾಡಬೇಕಿದೆ. ಚೌಬೀನೆಯು (ಮರದ) ಉತ್ತಮವಾದ ಪಾಲಿಷ್ ತೆಗೆದುಕೊಂಡು, ಕಡು ಕಂದು ಬಣ್ಣದಿಂದ ಕಪ್ಪು ಬಣ್ಣದವರೆಗೆ ಬಣ್ಣದಲ್ಲಿ ವ್ಯತ್ಯಾಸಗಳನ್ನು ನೋಡಬಹುದು. ಮನೆಯ ಒಳಾಂಗಣದ ಸೌಂದರ್ಯ ವರ್ಧನೆಗೆ ಅತ್ಯುತ್ತಮವಾದ ಮತ್ತು ಆರ್ಥಿಕವಾಗಿಯೂ ಅಷ್ಟು ಭಾರವಾಗದ ಮರವೆನಿಸುತ್ತದೆ. ಸಧ್ಯದಲ್ಲಿ ಮಾರುಕಟ್ಟೆಯು ಈ ಮರಕ್ಕೆ ಪೂರಕವಾಗಿಲ್ಲದೆ ಇರುವುದರಿಂದ, ಇದೊಂದೇ ಜಾತಿಯ ಮರವನ್ನು ಹೆಚ್ಚಿನ ಕೃಷಿ ಭೂಮಿಯಲ್ಲಿ ಬೆಳೆಯುವುದರ ಬದಲು ಇತರೆ ಮರಗಳಾದ ಸ್ಥಳೀಯ ಬೇವು, ಸ್ಥಳೀಯ ಮಾವು, ಹುಣಸೆ, ಹಲಸು, ಶ್ರೀಗಂಧ, ಹಾಲೆ, ಮಹಾಗನಿ, ರಕ್ತಚಂದನದಂತಹ ಮರಗಳನ್ನು ಬೆಳೆಸುವುದರಿಂದ, ಮಾರುಕಟ್ಟೆಯ ಪರಿಸ್ಥಿತಿಯನ್ನು ಸಮತೋಲನದಲ್ಲಿ ಕಾಯ್ದುಕೊಳ್ಳುವುದಲ್ಲದೆ, ಪ್ರಕೃತಿಯ ಬೇಡಿಕೆಯಾದ ವಿವಿಧತೆಯನ್ನು ಕಾಯ್ದುಕೊಂಡು, ಜೀವ ವೈವಿಧ್ಯದ ಮತ್ತು ವನ್ಯಜೀವಿಗಳ ಉಳಿವಿಗೂ ಸಹ ಸಹಕಾರಿಯಾಗಲಿದೆ.



# ಕೃಷಿ ಭೂಮಿಯಲ್ಲಿ ಶ್ರೀಗಂಧ – ಇಲ್ಲೊಂದಷ್ಟು ಸತ್ಯ

**ದೀಪಕ್ ಶರ್ಮ**, ಭಾ.ಅ.ಸೇ (ನಿ) ಮೊ: 99862 32094 ಹಾಗೂ **ಶಿವಾನಂದಮೂರ್ತಿ**, ಭಾ.ಅ.ಸೇ (ನಿವೃತ್ತ), ಮೊ: 94481 26246

ಕರ್ನಾಟಕವು ರಾಷ್ಟ್ರದಲ್ಲಿಯೇ ಅತೀ ಹೆಚ್ಚು ಶ್ರೀಗಂಧದ ಉತ್ಪಾದನೆಗೆ ಹೆಸರಾಗಿತ್ತು ಹಾಗೂ ಕರ್ನಾಟಕವನ್ನು ಶ್ರೀಗಂಧದ ನಾಡು, ಗಂಧದ ಬೀಡೆಂದು ಕರೆಯಲಾಗುತ್ತಿತ್ತು. ಆದರೆ ಅನೇಕ ಕಾರಣಗಳಿಂದ ಶ್ರೀಗಂಧದ ಉತ್ಪಾದನೆ ತುಂಬಾ ಕಡಿಮೆಯಾಗಿದೆ. ಇದನ್ನು ಮನಗಂಡ ಸರ್ಕಾರವು ಕರ್ನಾಟಕ ಅರಣ್ಯ ಕಾಯ್ದೆ 1963ಕ್ಕೆ 2001ರಲ್ಲಿ ತಿದ್ದುಪಡಿ ತರಲಾಯಿತು ಹಾಗೂ ಒಂದು ವರ್ಷದ ನಂತರ ಶ್ರೀಗಂಧ ಕಟಾವಣೆ ಮತ್ತು ಅದರ ವಿಲೇವಾರಿ ಮಾಡುವುದಕ್ಕೆ 1969ರ ಕರ್ನಾಟಕ ಅರಣ್ಯ ನಿಯಮಗಳಿಗೆ ತಿದ್ದುಪಡಿ ತರಲಾಯಿತು. ಇದರಲ್ಲಿ ಖಾಸಗೀ ಜಮೀನುಗಳಲ್ಲಿ ಬೆಳೆದಿರುವ ಶ್ರೀಗಂಧದ ಮರಗಳನ್ನು ಬೆಳೆದಿರುವ ರೈತರು ತಮ್ಮ ಜಮೀನುಗಳಲ್ಲಿದ್ದ ಶ್ರೀಗಂಧದ ಮರಗಳನ್ನು ಅರಣ್ಯ ಇಲಾಖೆಯೊಂದಿಗೆ ಘೋಷಣೆ ಮಾಡಿಕೊಳ್ಳುವುದನ್ನು ತೆಗೆದು ಹಾಕಿತು ಹಾಗೂ ಒಂದು ವೇಳೆ ಅವರ ಜಮೀನುಗಳಲ್ಲಿ ಶ್ರೀಗಂಧದ ಮರಗಳು ಕಳ್ಳತನವಾಗಿದ್ದಲ್ಲಿ ಅಥವಾ ಮರಗಳಿಗೆ ಹಾನಿ ಮಾಡಿದ್ದಲ್ಲಿ ಅಂತಹ ಪ್ರಕರಣಗಳನ್ನು ಸಮೀಪದ ಅರಣ್ಯ ಇಲಾಖೆ ಅಥವಾ ಆರಕ್ಷಕ ಇಲಾಖೆಗಾಗಲಿ ದೂರು ಕೊಡುವುದನ್ನು ಸಹ ತೆಗೆದು ಹಾಕಲಾಗಿದೆ ಹಾಗೂ ಶ್ರೀಗಂಧದ ಮರಗಳನ್ನು ಕಟಾವು ಮಾಡಲು ಅರಣ್ಯ ಇಲಾಖೆಯ ಅನುಮತಿಯನ್ನು ಕಾಲಮಿತಿಯೊಳಗೆ ನೀಡಬೇಕೆಂದು ಸಹ ತಿಳಿಸಲಾಗಿದೆ. ಇಷ್ಟೇ ಅಲ್ಲದೆ ಮಳೆಗಾಳಿಯಿಂದ ಹಾಗೂ ಒಣಗಿ ಬಿದ್ದಂತಹ ಮರಗಳಿಗೆ ಹಾಗೂ ಆಸ್ತಿ ಪಾಸ್ತಿಗೆ ಹಾಗೂ ಪ್ರಾಣ ಹಾನಿಯಾಗುವ ಸಂಭವವಿದ್ದಲ್ಲಿ ಅಥವಾ ಕೃಷಿ ವಿಸ್ತರಣೆಗಾಗಲಿ ತೊಂದರೆಯುಂಟು ಮಾಡುವಂತಹ ಸಂದರ್ಭಗಳಲ್ಲಿ ಅರಣ್ಯ ಇಲಾಖೆಯು ಶ್ರೀಗಂಧದ ಮರಗಳನ್ನು ತೆರವುಗೊಳಿಸುವುದಕ್ಕೆ ಸಾಮಾನ್ಯವಾಗಿ ತಿರಸ್ಕರಿಸುವಂತಿಲ್ಲ. ಇಲ್ಲಿ ಶ್ರೀಗಂಧ ಬೆಳೆಯುವ ರೈತರು / ಮಾಲೀಕರಿಗೆ ಮರಗಳನ್ನು ಮಾರಾಟ ಮಾಡಲು ಸ್ವಾತಂತ್ರ್ಯವನ್ನು ನೀಡಲಾಗಿದೆ. ಆದರೆ ಮಾರಾಟವನ್ನು ರಾಜ್ಯ ಸರ್ಕಾರದ ಅರಣ್ಯ ಇಲಾಖೆಗಾಗಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿರುವ (ಸ್ವಾಮಿತ್ವದ) ಸಂಸ್ಥೆಗಳಿಗೆ ಮಾರಾಟ ಮಾಡುವುದಕ್ಕೆ ಕಾಲಕ್ಕೆ ತಕ್ಕಂತೆ ಬೆಲೆಯನ್ನು ಘೋಷಣೆ ಮಾಡಲಾಗುವುದು.

ಶ್ರೀಗಂಧದ ಮರಗಳನ್ನು ಕಟಾವು ಅಥವಾ ತೆರವುಗೊಳಿಸಲು, ಸಂಗ್ರಹಿಸಲು ಮತ್ತು ಸಾಗಾಣಿಕೆಯನ್ನು ಮಾಲೀಕರೇ ಅರಣ್ಯ ಇಲಾಖೆಯ ಮೇಲುಸ್ತುವಾರಿಯೊಂದಿಗೆ ಮಾಡಬೇಕಿದೆ. ಶ್ರೀಗಂಧದ ಮರದ ಮೌಲ್ಯ ಅಥವಾ ಬೆಲೆಯನ್ನು ಮಾಲೀಕರಿಗೆ ಎಷ್ಟು ಸಾಧ್ಯವೋ ಅಷ್ಟು ಸಮಯದೊಂದಿಗೆ ಅಂದರೆ ಅರಣ್ಯ ಇಲಾಖೆಯ ಡಿಪೋಗಳಲ್ಲಿ ಸ್ವೀಕರಿಸಿದ ಮೂರು ತಿಂಗಳೊಳಗಾಗಿ ಪಾವತಿಸಬೇಕಾಗಿದೆ ಹಾಗೂ ಅದಕ್ಕೆ ತಕ್ಕಂತೆ ದಿನಾಂಕದೊಂದಿಗೆ ರಸೀದಿಯನ್ನು ಸಹ ನೀಡಬೇಕಾಗಿದೆ. ಶ್ರೀಗಂಧದ ಮರಕ್ಕೆ ಪ್ರತಿ ಹಣಕಾಸಿನ ವರ್ಷದಲ್ಲಿ ಅರಣ್ಯ ಇಲಾಖೆಯ ಹರಾಜಿನಲ್ಲಿ ದೊರೆಯುವ ಸರಾಸರಿ ಬೆಲೆಯನ್ನು ಆಧರಿಸಿ ಖಾಸಗೀ ಶ್ರೀಗಂಧಕ್ಕೆ ಬೆಲೆಯನ್ನು ನಿಗಧಿಪಡಿಸಲಾಗುವುದು. ಸರ್ಕಾರದಿಂದ ತೆಗೆದುಕೊಂಡಿರುವ ಈ ಮೇಲಿನ ಧೋರಣೆಗಳು ಅಂದರೆ ಅರಣ್ಯ ಕಾಯ್ದೆಗೆ / ಅರಣ್ಯ ನಿಯಮಗಳಿಗೆ ತಿದ್ದುಪಡಿ ತಂದು ಶ್ರೀಗಂಧದ ತೆರವುಗೊಳಿಸುವುದು ಮತ್ತು ವಿಲೇವಾರಿಗೆ ಇರುವ ವಿಧಾನವನ್ನು ಸುಗಮಗೊಳಿಸಿರುವುದು ರೈತರಲ್ಲಿರುವ ಆತಂಕ ಅಥವಾ ಭಯಭೀತಿಯನ್ನು ನಿವಾರಣೆಗೊಳಿಸಲಾಗಿದೆ. ಇದರಿಂದ ರೈತರು ಖಾಸಗೀ ಜಮೀನುಗಳಲ್ಲಿ ಯಾವುದೇ ಆತಂಕವಿಲ್ಲದೆ ಶ್ರೀಗಂಧವನ್ನು ಬೆಳೆಯಲು ಪ್ರೋತ್ಸಾಹಿಸಿದಂತಾಗಿದೆ.



ಈ ಮೇಲಿನ ಅರಣ್ಯ ಇಲಾಖೆಯ ಕ್ರಮಗಳು ಜನರಲ್ಲಿರುವ ಆತಂಕವನ್ನು ನಿವಾರಿಸಲು ಅಂದರೆ ಈ ಮೊದಲು ಇದ್ದಂತಹ ಕಾನೂನಿನಡಿ ಶ್ರೀಗಂಧದ ಮರ ಎಲ್ಲೇ ಬೆಳೆದರು ಅದು "ರಾಜ್ಯ ಸರ್ಕಾರದ ಸ್ವತ್ತಾಗಿತ್ತು" ಈಗ ಇದನ್ನು ತೆಗೆದು ಹಾಕಿರುವುದರಿಂದ ಶ್ರೀಗಂಧವನ್ನು ಖಾಸಗೀ ಜಮೀನುಗಳಲ್ಲಿ ಬೆಳೆದಂತಹ ರೈತರೇ ಮಾಲೀಕರೆಂದು ಘೋಷಣೆ ಮಾಡಲಾಗಿದೆ ಹಾಗೂ ಇದಕ್ಕೆ ಅನುಕೂಲವಾಗಲು ಮರಗಳನ್ನು ತೆರವುಗೊಳಿಸಲು, ಸಂಗ್ರಹಿಸಿಡಲು ಮತ್ತು ಸಾಗಾಣಿಕೆಯ ನಿಯಮಗಳಿಗೆ ಮತ್ತು ಮಾರಾಟ ಮಾಡಲು ಸರಳೀಕೃತಗೊಳಿಸಿರುವ ಫಲಶೃತಿಯಾಗಿ ರೈತರು ಹೆಚ್ಚು ಹೆಚ್ಚು ಶ್ರೀಗಂಧದ ಮರಗಳನ್ನು ರಾಜ್ಯದ ಉದ್ದಗಲಕ್ಕೂ ಬೆಳೆಸಲು ಪ್ರಾರಂಭಿಸಿರುವುದು ಕರ್ನಾಟಕಕಿದ್ದ ಶ್ರೀಗಂಧದ ನಾಡೆಂಬ ಮೆರಗನ್ನು ಮರಳಿ ತಂದಂತಾಗಲಿದೆ. ಇತ್ತೀಚಿನ ದಿನಗಳಲ್ಲಿ ಶ್ರೀಗಂಧವು ರಾಜ್ಯದ ಕೃಷಿವನಗಳಲ್ಲಿ ಬೆಳೆಸಬಹುದಾದ ಮರಗಳಲ್ಲೊಂದಾಗಿರುವುದು ಶ್ರೀಗಂಧ ಬೆಳೆಸಲು ಪುಷ್ಠಿಯನ್ನು ನೀಡಿದಂತಾಗಿದೆ. ಜೊತೆಗೆ ರಾಜ್ಯದ ಅರಣ್ಯ ಇಲಾಖೆಯಲ್ಲಿರುವ ಯೋಜನೆಗಳಾದ ಸಾರ್ವಜನಿಕರ ವಿತರಣೆಗಾಗಿ ಸಸಿ ಬೆಳೆಸುವುದು ಮತ್ತು ಕೃಷಿಅರಣ್ಯ ಪ್ರೋತ್ಸಾಹ ಯೋಜನೆಗಳು ರೈತರಿಗೆ ಅತೀ ಕಡಿಮೆ ದರದಲ್ಲಿ ಶ್ರೀಗಂಧದ ಸಸಿಗಳನ್ನು ಬೆಳೆಸಿ, ವಿತರಿಸಲಾಗುತ್ತಿದೆ ಮತ್ತು ಈ ಯೋಜನೆಯಡಿ ಶ್ರೀಗಂಧವನ್ನು ಬೆಳೆಸಲು ಹಣಕಾಸಿನ ನೆರವನ್ನು ಸಹ ಕಲ್ಪಿಸಲಾಗಿದೆ. ಇದರಿಂದಾಗಿ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಶ್ರೀಗಂಧವನ್ನು ಬೆಳೆಸಲು ಪ್ರಾರಂಭಿಸಿರುವುದು ಆಶಾದಾಯಕ ಸಂಗತಿಯಾಗಿದೆ.

ಶ್ರೀಗಂಧದ ಮರಗಳನ್ನು ಖಾಸಗೀ ಜಮೀನುಗಳಲ್ಲಿ ಬೆಳೆಯುವುದು ಅರಣ್ಯ ಪ್ರದೇಶಗಳು ಸೇರಿದಂತೆ ಸಾರ್ವಜನಿಕ ಭೂಮಿಯಲ್ಲಿ ಬೆಳೆಯುವುದಕ್ಕಿಂತ ಹೆಚ್ಚಿನ ಅನುಕೂಲವಾಗುವುದು. ಏಕೆಂದರೆ ಪ್ರಾರಂಭಿಕ ಹಂತದಲ್ಲಿ ಗಿಡಗಳನ್ನು ಬೆಂಕಿ ಮತ್ತು ದನಕರುಗಳು ತಿಂದು ಹಾಳು ಮಾಡುತ್ತವೆ. ಈ ಎರಡೂ ಕಾರಣಗಳು ಶ್ರೀಗಂಧದ ಮರಗಳು ಕಡಿಮೆಯಾಗಲು ಬಹು ಮುಖ್ಯ ಕಾರಣವಾಗಿದೆ. ಶ್ರೀಗಂಧದ ಮರಗಳನ್ನು ಖಾಸಗೀ ಭೂಮಿಯಲ್ಲಿ ಬೆಳೆಯುವುದರಿಂದ ಮೇಲಿನ ಈ ಎರಡೂ ಕಾರಣಗಳನ್ನು ರೈತರು ಮತ್ತು ಭೂಮಿಯ ಮಾಲೀಕರು ರಕ್ಷಣೆ ಒದಗಿಸುವುದರಿಂದ ಸುರಕ್ಷಿತವಾಗಿ ಬೆಳೆಯಬಹುದು. ಸಾರ್ವಜನಿಕ ಭೂಮಿಯಲ್ಲಿ ಅದರಲ್ಲೂ ಅರಣ್ಯ ಭೂಮಿಯಲ್ಲಿ ಹೆಚ್ಚಿನ ವಿಸ್ತಾರದಲ್ಲಿ ಬೆಳೆಸುವಾಗ ಈ ಎರಡೂ ಕಾರಣಗಳನ್ನು ನಿಭಾಯಿಸುವುದು ಅಷ್ಟು ಸುಲಭವೇನಲ್ಲ. ಪ್ರತೀ ವರ್ಷವು ಅನೇಕ ಶ್ರೀಗಂಧದ ಸಸಿಗಳನ್ನು ಸಾಕು ಪ್ರಾಣಿಗಳಾದ ದನ–ಕರುಗಳು ಹಾಗೂ ಸಸ್ಯಹಾರಿ ಪ್ರಾಣಿಗಳು ತಿನ್ನುವುದರಿಂದ ಮತ್ತು ಇದರ ಜೊತೆಗೆ ಒಣ ಹವೆಯಲ್ಲಿ ಪ್ರತಿ ವರ್ಷವು ಉಂಟಾಗುವ ಬೆಂಕಿಯಿಂದಾಗಿ ಸಾಕಷ್ಟು ಸಂಖ್ಯೆಯಲ್ಲಿ ಶ್ರೀಗಂಧದ ಗಿಡಗಳು ಕಡಿಮೆಯಾಗುತ್ತಾ ಬರುತ್ತವೆ. ನೈಸರ್ಗಿಕ ಅರಣ್ಯ ಪ್ರದೇಶದಲ್ಲಿ ಶ್ರೀಗಂಧದ ಮರಗಳಿಗೆ ಬಳ್ಳಿಗಳು ಹಬ್ಬುವುದರಿಂದ ಅಥವಾ ಅಕ್ಕಪಕ್ಕದ ಮರಗಳ ಕೊಂಬೆಗಳು ಶ್ರೀಗಂಧದ ಗಿಡಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಏಕೆಂದರೆ ಅರಣ್ಯ ಪ್ರದೇಶದಲ್ಲಿ ಚದುರಿದಂತೆ ಬೆಳೆಯುವುದರಿಂದ ಅವುಗಳಿಗೆ ಹಬ್ಬುವ ಬಳ್ಳಿಗಳನ್ನು ಕತ್ತರಿಸಿ ತೆಗೆಯಲು ಅಥವಾ ಪಕ್ಕದ ಮರಗಳ ಕೊಂಬೆಗಳನ್ನು ಆಗಿಂದಾಗ್ಯೆ ಕತ್ತರಿಸಿ ತೆಗೆಯುವುದು ಕಷ್ಟದ ಕೆಲಸವಾಗಿರುತ್ತದೆ. ಈ ಕಾರಣಗಳಿಂದಾಗಿ ನೈಸರ್ಗಿಕ ಅರಣ್ಯ ಪ್ರದೇಶದಲ್ಲಿ ಬೆಳೆಯುವ ಶ್ರೀಗಂಧದ ಮರಗಳು ಅಷ್ಟು ಉತ್ಕೃಷ್ಟವಾಗಿ ಬೆಳೆಯುವುದಿಲ್ಲ. ಖಾಸಗೀ ಭೂಮಿಯಲ್ಲಿ ಕಡಿಮೆ ಪ್ರದೇಶದಲ್ಲಿ ಹಾಗೂ ಕಡಿಮೆ ಸಂಖ್ಯೆಯಲ್ಲಿ ಶೀಗಂಧದ ಮರಗಳನ್ನು ಬೆಳೆಯುವುದರಿಂದ, ಗಿಡಗಳು ಬಳ್ಳಿಗಳಿಂದಾಗಲಿ ಅಥವಾ ಅಕ್ಕಪಕ್ಕದ ಮರಗಳ ಕೊಂಬೆಗಳು ಶ್ರೀಗಂಧದ ಮರಗಳನ್ನು ಮುಚ್ಚಿಕೊಳ್ಳುವುದನ್ನು ಸುಲಭವಾಗಿ ಬೆಳೆಯುವ ರೈತರು ಅಥವಾ ಭೂ ಮಾಲೀಕರು ಆಗಿಂದಾಗ್ಯೆ ಅವಶ್ಯಕತೆಗನುಗುಣವಾಗಿ ಕತ್ತರಿಸಿ ತೆಗೆಯುವುದರಿಂದ ಶ್ರೀಗಂಧದ ಮರಗಳು ಚೆನ್ನಾಗಿ ಅಭಿವೃದ್ಧಿ ಹೊಂದುವವು. 75 ಸೆಂ.ಮೀ. ಗಳಿಗಿಂತ ಕಡಿಮೆ ಮಳೆ ಬೀಳುವ ನೈಸರ್ಗಿಕ ಅರಣ್ಯ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಡಿಮೆ ಸಂಖ್ಯೆಯಲ್ಲಿ ಶ್ರೀಗಂಧದ ಮರಗಳು ಬೆಳೆಯುವುದನ್ನು ಕಾಣಬಹುದು. ಆದರೆ 75 ಸೆಂ.ಮೀ.ಗಿಂತ ಕಡಿಮೆ ಮಳೆ ಬೀಳುವ ಕೃಷಿ ಭೂಮಿಯಲ್ಲೂ ಸಹ ಶ್ರೀಗಂಧದ ಮರಗಳನ್ನು

ಅವಶ್ಯವಾದ ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕ್ರಮಗಳೊಂದಿಗೆ ಹಾಗೂ ಸಸಿಗಳು ಚಿಕ್ಕದಿರುವಾಗ ಬೇಸಿಗೆ ಸಮಯದಲ್ಲಿ ರಕ್ಷಣಾತ್ಮಕ ನೀರಾವರಿಯೊಂದಿಗೆ ಬೆಳೆಯಬಹುದು. ಕೃಷಿ ಭೂಮಿಯಲ್ಲಿ ಶ್ರೀಗಂಧದ ಮರಗಳು ಅರಣ್ಯ ಭೂಮಿಯಲ್ಲಿ ಬೆಳೆಯುವುದಕ್ಕಿಂತ ಹೆಚ್ಚು ಉತ್ತಮವಾಗಿ ಬೆಳೆಯುವುದರಿಂದ ಸುಮಾರು 15 ರಿಂದ 20 ವರ್ಷದಲ್ಲಿ ಕಟಾವು ಮಾಡಬಹುದು. ಆದರೆ ಸಮೀಪದ ಅರಣ್ಯ ಪ್ರದೇಶದಲ್ಲಿ ಬೆಳೆಯುವ ಮರಗಳ ಕಟಾವಣೆಗೆ 25 ರಿಂದ 30 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳು ಬೇಕಾಗುವುದು.

ಈಗಾಗಲೇ ತಿಳಿಸಿರುವಂತೆ ಶ್ರೀಗಂಧದ ಮರಗಳು ನೀರು ಚೆನ್ನಾಗಿ ಬಸಿಯುವಂತಹ ಮಣ್ಣಿನಲ್ಲಿ ಉತ್ತಮವಾಗಿ ಬೆಳೆಯುತ್ತವೆ. ಇದು ಎಲೆಯುದುರುವ ಅರಣ್ಯ ಪ್ರದೇಶದಲ್ಲಿ ನೈಸರ್ಗಿಕವಾಗಿ ಬೆಳೆಯುವ ಜಾತಿಯ ಮರವಾಗಿದ್ದು, ಇಂತಹದೇ ಮಣ್ಣು ಬೇಕೆಂದು ಬಯಸುವುದಿಲ್ಲ. ಪ್ರಾರಂಭಿಕ ಹಂತದ ಮೊದಲ ಎರಡು ಮೂರು ವರ್ಷಗಳಲ್ಲಿ ಶ್ರೀಗಂಧದ ಮರಗಳಿಗೆ ನೀರುಣಿಸುವುದು, ಗೊಬ್ಬರ ಹಾಕುವುದು ಮತ್ತು ಸುತ್ತಲಿನ ಮಣ್ಣನ್ನು ಸಡಿಲಗೊಳಿಸುವ ಕೆಲಸಗಳ ಸಹಾಯವನ್ನು ಬೇಡುತ್ತವೆ. ಶ್ರೀಗಂಧದ ಮರಗಳು ತನ್ನಷ್ಟಕ್ಕೇ ತಾನೇ ಬೆಳೆಯಬಲ್ಲವು. ಆದರೆ ಅವುಗಳ ಮಧ್ಯದಲ್ಲಿ ಸಾಕಷ್ಟು ಸಂಖ್ಯೆಯ ಅತಿಥಿ ಸಸ್ಯಗಳಿರಬೇಕಷ್ಟೆ. ಬಳ್ಳಿಗಳನ್ನು ಕತ್ತರಿಸುವುದು, ಕಳೆ ತೆಗೆಯುವ ಮತ್ತು ಅವುಗಳ ಮೇಲ್ಭಾಗದಲ್ಲಿ ಬರುವ ಪಕ್ಕದ ಮರಗಳ ಕೊಂಬೆಗಳನ್ನು ಕತ್ತರಿಸಿ ತೆಗೆಯುವುದರ ಜೊತೆಗೆ ಕಟ್ಟು ನಿಟ್ಟಾಗಿ ಬೆಂಕಿ ಮತ್ತು ದನಕರುಗಳು ತಿನ್ನುವುದರಿಂದ ರಕ್ಷಣೆ ನೀಡಬೇಕಿದೆ. ರಕ್ಷಣಾತ್ಮಕ ನೀರಾವರಿಯನ್ನು ಒಣ ಪ್ರದೇಶದಲ್ಲಿ ಕೊಡುವುದರಿಂದ ಮರಗಳ ಬೆಳವಣಿಗೆಯನ್ನು ಹೆಚ್ಚಿಸಬಹುದು. ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಶ್ರೀಗಂಧದ ಮರಗಳು ತನ್ನಷ್ಟಕ್ಕೆ ತಾನೇ ನೈಸರ್ಗಿಕ ಅರಣ್ಯ ಪ್ರದೇಶದಲ್ಲಿರುವಂತೆ ಬೆಳೆಯಲು ಬಿಡುವುದು ಉತ್ತಮ. ಶ್ರೀಗಂಧದ ಮರಗಳಲ್ಲಿ ಸುವಾಸನೆಯುಕ್ತ ಮರ (ಹೃದಯ ಭಾಗ)ದ ಬೆಳವಣಿಗೆಯು ನೈಸರ್ಗಿಕವಾಗಿ ಉಂಟಾಗುವ ಒತ್ತಡಗಳೇ ಕಾರಣಗಳಾಗಿರುತ್ತವೆ.

ಶ್ರೀಗಂಧವನ್ನು ಬ್ಲಾಕ್ ನೆಡುತೋಪುಗಳಲ್ಲಿ ಬೇರೆ ಅತಿಥಿ ಮರಗಳು ಮತ್ತು ಇತರೆ ಆರ್ಥಿಕವಾಗಿ ಮುಖ್ಯವಾದ ಮರಗಳು ಅಂದರೆ ಹಣ್ಣು ಬಿಡುವ ಮರಗಳನ್ನು ಬೆಳೆಸುವುದು ಸಾಮಾನ್ಯವಾಗಿ ಹೆಚ್ಚು ಭೂಮಿಯನ್ನು ಹೊಂದಿರುವ ರೈತರು ಬೆಳೆಸುವರು. ಆದರೆ ಶ್ರೀಗಂಧದ ಮರಗಳನ್ನು ಯಾವುದೇ ಸಮಸ್ಯೆಯಿಲ್ಲದೆ ಎಲ್ಲಾ ರೈತರುಗಳು ತಮ್ಮ ಜಮೀನಿನ ಬೇಲಿ ಸಾಲಿನಲ್ಲಿ ಹಾಗೂ ಕೃಷಿ ಭೂಮಿಯ ಗಡಿಗಳಲ್ಲಿ ಮತ್ತು ಮನೆಯ ಹಿತ್ತಲುಗಳಲ್ಲಿ ಬೆಳೆಯಬಹುದು. ಇನ್ನು ಒಣ ಪ್ರದೇಶಗಳಲ್ಲಿ ಶ್ರೀಗಂಧವನ್ನು ಅಗೇವ್, ಕಳ್ಳಿ (ಕತ್ತಳೆ) ಮತ್ತು ಇತರೆ ಮುಳ್ಳಿನ ಗಿಡಗಂಟಿಗಳೊಂದಿಗೆ ಕೃಷಿ ಭೂಮಿಯ ಸರಹದ್ದಿನಲ್ಲಿ ಬೆಳೆಯಬಹುದು. ಶ್ರೀಗಂಧದ ಮರಗಳನ್ನು ಬಸಿಗಾಲುವೆಗಳು ಅಥವಾ ಕೃಷಿ ಭೂಮಿ ಮಧ್ಯೆ ಹಾಗೂ ಹಾಯ್ದು ಹೋಗುವ ನೀರಿನ ಕಾಲುವೆಗಳ ಇಕ್ಕೆಲಗಳಲ್ಲಿ ಬೆಳೆಸಲು ಸೂಕ್ತವಾಗಿದೆ. ಇಲ್ಲಿ ಸಾಲುಗಳಲ್ಲಿ ಬೆಳೆಸುವುದರಿಂದ ಸಾಮಾನ್ಯವಾಗಿ ಒಣ ಪ್ರದೇಶಗಳಲ್ಲೂ ತೇವಾಂಶ ಹೆಚ್ಚಿರುವುದರಿಂದ ಇತರೆ ಮರಗಳಾದ ಹೊಂಗೆ, ಹಾಲೆ, ಅಂಕೋಲಾ ಮರ, ನೆಲ್ಲಿ, ನೇರಳೆ ಮರಗಳೊಂದಿಗೆ ಶ್ರೀಗಂಧವನ್ನು ಉತ್ಕೃಷ್ಟವಾಗಿ ಬೆಳೆಸಬಹುದು.

ರೈತರ ಭೂಮಿಯಲ್ಲಿ ಶ್ರೀಗಂಧದ ಮರಗಳು ಬೆಳೆದಂತೆ, ರೈತರು ತೀವ್ರ ತೆರನಾದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಕೆಲವು ಕಡೆ ಕಳ್ಳತನದಿಂದ ಕಡಿದುಕೊಂಡು ಹೋಗುತ್ತಿರುವುದು ಸಾಮಾನ್ಯ ದೃಶ್ಯವಾಗಿರುತ್ತದೆ. ಕಾರಣ ಶ್ರೀಗಂಧದ ಮರಕ್ಕಿರುವ ಬೆಲೆಯಿಂದಾಗಿ ಇದರ ಕಳ್ಳತನಗಳು ಅಥವಾ ಅಕ್ರಮ ಸಾಗಾಣಿಕೆ ಹೆಚ್ಚುತ್ತಿರುವುದರಿಂದ ಸಾರ್ವಜನಿಕ ಭೂಮಿಯಲ್ಲಿ ಹಾಗೂ ಅರಣ್ಯ ಪ್ರದೇಶಗಳಲ್ಲಿ ಶ್ರೀಗಂಧದ ಮರಗಳು ಅಳಿವಿನಂಚನ್ನು ತಲುಪಿವೆ.

ಆದರೆ ಅರಣ್ಯ ಇಲಾಖೆಯಿಂದಾಗಲಿ ಸರ್ಕಾರದಿಂದಾಗಲಿ ಖಾಸಗೀ ಭೂಮಿಯಲ್ಲಿ ಬೆಳೆಯುತ್ತಿರುವ ಶ್ರೀಗಂಧದ ಮರಗಳಿಗೆ ರಕ್ಷಣೆ ನೀಡುವುದು ಅಷ್ಟು ಸುಲಭದ ಕೆಲಸವಲ್ಲ. ಆದರೆ ರೈತರಿಗೆ ಉಂಟಾಗುವ ನಷ್ಟನ್ನು ತಡೆಗಟ್ಟಲು ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಈ ಕೆಳಗೆ ತಿಳಿಸಿರುವ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

1 ದೊಡ್ಡ ಪ್ರಮಾಣದಲ್ಲಿ ಶ್ರೀಗಂಧದ ಮರಗಳನ್ನು ಬೆಳೆಸುವ ರೈತರು ನೆಡುತೋಪುಗಳಿಗೆ ಹೆಚ್ಚಿನ ರೀತಿಯಲ್ಲಿ ಕಾವಲಿನ ವ್ಯವಸ್ಥೆ ಮಾಡಬೇಕಿದೆ. ಅಂದರೆ ಚೈನ್ ಲಿಂಕ್ ಮೆಶ್ ಫೆನ್ಸಿಂಗ್ ಅಥವಾ ಕಲ್ಲಿನ ಗೋಡೆಗಳನ್ನು ಸುತ್ತಲೂ ನಿರ್ಮಿಸಿ, ರಾತ್ರಿ, ಹಗಲು ಕಾವಲು ಕಾಯುವ ವ್ಯವಸ್ಥೆಯನ್ನು ಅರಣ್ಯ ಇಲಾಖೆಯು ಇತ್ತೀಚೆಗೆ ಶ್ರೀಗಂಧದ ನೆಡುತೋಪುಗಳನ್ನು "ಎಸ್ಟೇಟ್ ಮಾದರಿ"ಯಲ್ಲಿ ಬೆಳೆಸುತ್ತಿರುವಂತೆ ಕ್ರಮ ಕೈಗೊಳ್ಳಬೇಕಿದೆ. ಏಕೆಂದರೆ ಶ್ರೀಗಂಧಕ್ಕಿರುವ ಹೆಚ್ಚು ಬೆಲೆ ಮತ್ತು ಇದರಿಂದ ಹೆಚ್ಚು ಆದಾಯ ಬರುವುದರಿಂದ ಈ ರೀತಿಯ ಕ್ರಮಗಳನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಆದ್ದರಿಂದ ರೈತರು ಸ್ವ–ಆಸಕ್ತಿಯಿಂದ ಬೇಲಿಗಳನ್ನು ನಿರ್ಮಿಸಲು ಅಥವಾ ಅವಶ್ಯಕವಾದ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದರಿಂದ ನೆಡುತೋಪಿಗೆ ಪೂರ್ಣ ಪ್ರಮಾಣದಲ್ಲಿ ರಕ್ಷಣೆ ಒದಗಿಸಲು ಸಾಧ್ಯವಾಗುವುದು.

2 ಮತ್ತೊಂದು ಸಲಹೆಯೆಂದರೆ ಶ್ರೀಗಂಧದ ಮರಗಳಿಗೆ ಹೆಚ್ಚಿನ ಭದ್ರತೆ ಒದಗಿಸಲು ಹಾಗೂ ಕಳ್ಳತನದಿಂದ ಉಂಟಾಗುವ ಭಯವನ್ನು ನೀಗಿಸಲು, ಶ್ರೀಗಂಧವನ್ನು ಬೆಳೆಯುವ ರೈತರೆಲ್ಲರೂ ಸೇರಿ ಒಂದು ಗುಂಪು ರಚಿಸಿಕೊಂಡು ಸಹಕಾರ ತತ್ವ ಆಧಾರದ ಮೇಲೆ ಬೆಳೆಸುವುದು. ಇದರಿಂದ ಭದ್ರತೆಗೆ ನೀಡುವ ವೆಚ್ಚವನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳುವುದರಿಂದ, ಪ್ರತಿಯೊಬ್ಬರಿಗೂ ಕಡಿಮೆ ವೆಚ್ಚ ತಗುಲುವುದು.

3 ಶ್ರೀಗಂಧವನ್ನು ಬೆಳೆದಿರುವ ರೈತರು ಭದ್ರತೆಗಾಗಿ ನವೀನ ಎಲೆಕ್ಟ್ರಾನಿಕ್ ಉಪಕರಣಗಳಾದ ಸಿ.ಸಿ. ಕ್ಯಾಮರಾಗಳು, ಸರ್ವೆಲೆನ್ಸ್ ವಿಧಾನಗಳು (ಕಣ್ಗಾವಲು ಉಪಕರಣಗಳು), ಹೈಸ್ಪೀಡ್ ಇನ್‌ಫ್ರಾರೆಡ್ ಉಪಕರಣಗಳು ಮುಂತಾದವುಗಳನ್ನು ಅವಶ್ಯಕತೆಗನುಗುಣವಾಗಿ ನೆಡುತೋಪಿನಲ್ಲಿ ಅಳವಡಿಸಿಕೊಳ್ಳಬೇಕಿದೆ. ಈ ಉಪಕರಣಗಳು ಕಳ್ಳಕಾಕರ ಓಡಾಟವನ್ನು ಅಥವಾ ಅಪರಿಚಿತ ವ್ಯಕ್ತಿಗಳ ಚಲನವಲನಗಳನ್ನು ದಾಖಲಿಸುವುದರಿಂದ, ಅವರುಗಳನ್ನು ಬಂಧಿಸಲು ಸಹಕಾರಿಯಾಗುವುದು. ಇದೊಂದು ರೀತಿಯಲ್ಲಿ ಮನಸ್ಸಿನಲ್ಲಿ ಭಯವನ್ನು ಉಂಟು ಮಾಡುವುದಲ್ಲದೇ ಮತ್ತೇನಾದರು ಕಾನೂನು ಬಾಹಿರ ಚಟುವಟಿಕೆಗಳು ಕಂಡುಬಂದಲ್ಲಿ ನಿಯಂತ್ರಿಸಬಹುದು. ಕೆಲವು ಎಲೆಕ್ಟ್ರಾನಿಕ್ ಉಪಕರಣಗಳು ಹೊರಗಿನ ವ್ಯಕ್ತಿಗಳ ಚಲನವಲನಗಳ ಮಾಹಿತಿಯನ್ನು ನಿಯಂತ್ರಣ ಕೊಠಡಿಗೆ ಸಿಗ್ನಲ್ ಮೂಲಕ ತಲುಪಿಸುವುದರಿಂದ, ತಕ್ಷಣವೇ ಮುಂದಿನ ಕ್ರಮ ತೆಗೆದುಕೊಳ್ಳಲು ಸಹಕಾರಿಯಾಗುವುದು. ಮರವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ (IWST), ಬೆಂಗಳೂರು ವತಿಯಿಂದ ಇಂತಹ ನೂತನ ಆವಿಷ್ಕಾರವನ್ನು ಅಭಿವೃದ್ಧಿಪಡಿಸಲು ಬೇಕಾದ ಸಂಶೋಧನೆಗಾಗಿ ಮತ್ತು ಮುಂದಿನ ಅಧ್ಯಯನಕ್ಕಾಗಿ ಹಣವನ್ನು ನೀಡುತ್ತಿದೆ.

4 ಖಾಸಗೀ ಭೂಮಿಯಲ್ಲಿ ಬೆಳೆಯುವ ಶ್ರೀಗಂಧದ ಮರಗಳಿಗೆ ವಿಮೆ (ಇನ್ಶೂರೆನ್ಸ್)ಯ ಅವಶ್ಯಕತೆಯಿದೆ. ಇದಕ್ಕೆ ಕರ್ನಾಟಕ ಅರಣ್ಯ ಇಲಾಖೆ ಮತ್ತು ಸರ್ಕಾರದವರು ಮಾನ್ಯತೆ ಪಡೆದಿರುವ ಉತ್ತಮವಾದ ವಿಮಾ ಕಂಪನಿಯೊಂದಿಗೆ ವಿಮೆ ಮಾಡಲು ಸಹಕರಿಸಬೇಕಿದೆ. ಪ್ರತಿ ವರ್ಷದ ವಿಮಾ ಕಂತನ್ನು ರೈತರೇ ಪಾವತಿಸಬೇಕಿದೆ ಮತ್ತು ಕಳ್ಳತನವಾದಲ್ಲಿ / ನಷ್ಟ ಉಂಟಾದಲ್ಲಿ ನೀಡಬೇಕಾದ ಪರಿಹಾರದ ಮೊತ್ತವನ್ನು ಬೆಳೆಯುತ್ತಿರುವ ಶ್ರೀಗಂಧದ ಮರಗಳ ವಯಸ್ಸಿಗನುಗುಣವಾಗಿ ನಿಗಧಿಪಡಿಸಬೇಕಿದೆ. ಶ್ರೀಗಂಧದ ಮರಗಳು ಐದು ವರ್ಷ ತಲುಪಿದ ನಂತರ ಅವುಗಳಿಗೆ ವಿಮೆ ಮಾಡಿಸಬೇಕಿದೆ.

5 ಅನಿವಾರ್ಯ ಸಂದರ್ಭಗಳಲ್ಲಿ ಖಾಸಗೀ ಜಮೀನುಗಳನ್ನು ಸರ್ಕಾರದ ವತಿಯಿಂದ ಸಾರ್ವಜನಿಕ ಉದ್ದೇಶಕ್ಕಾಗಿ ಪಡೆದುಕೊಂಡಾಗ ಇಂತಹ ಪ್ರಕರಣಗಳಲ್ಲಿ ಬೆಳೆದಿರುವ ಮರಗಳಿಗೂ ಸಹ ಪರಿಹಾರದ ಮೊತ್ತವನ್ನು ಭೂಮಿಯ ಬೆಲೆಯೊಂದಿಗೆ ಹೆಚ್ಚುವರಿಯಾಗಿ ನೀಡಬೇಕಿದೆ. ಇಂತಹ ಪ್ರಕರಣಗಳಲ್ಲಿ ಸಾಮಾನ್ಯವಾಗಿ ಅರಣ್ಯ ಇಲಾಖಾ ವತಿಯಿಂದ ಭೂಮಿಯ ಮಾಲೀಕರಿಗೆ ಬೆಳೆದಿರುವ ಮರಗಳನ್ನು ಕಟಾವು ಮಾಡಿ ಮಾರಾಟ ಮಾಡಿ ಬಂದಂತಹ ಮೊಬಲಗನ್ನು ಪಾವತಿಸಲಾಗುವುದು. ಕೆಲವು ಸಂದರ್ಭಗಳಲ್ಲಿ ಎಳೆ ವಯಸ್ಸಿನ ಮರಗಳಿದ್ದಲ್ಲಿ, ಅಂತಹ ಮರಗಳು ಮಾರಾಟ ಮಾಡಲು ಯೋಗ್ಯವಾಗಿರುವುದಿಲ್ಲ. ಇಲ್ಲಿ ಆ ಮರಗಳನ್ನು ಬೆಳೆಸಲು ತಗಲಿರುವ ವೆಚ್ಚವನ್ನು ಪರಿಹಾರವಾಗಿ ನೀಡಲಾಗುವುದು.ಇಲ್ಲೊಂದು ಸಲಹೆಯೆಂದರೆ, ಕೃಷಿ ಭೂಮಿಯಲ್ಲಿ ಮರಗಳನ್ನು ಕೃಷಿವನ ನಿರ್ಮಾಣದ ಉದ್ದೇಶದಿಂದ ಬೆಳೆಸಿದ್ದಲ್ಲಿ ಇಂತಹ ಪ್ರಕರಣಗಳಲ್ಲಿ ಮಾರಾಟಕ್ಕೆ ಯೋಗ್ಯವಲ್ಲದ ಮರದ ಉತ್ಪನ್ನಗಳು ದೊರೆತರೆ ಅಂದರೆ ಎಳೆ ವಯಸ್ಸಿನ ಶ್ರೀಗಂಧದ ಮರಗಳಾಗಿದ್ದಲ್ಲಿ, ಇವುಗಳಿಗೆ ಸಹಾನುಭೂತಿಯಿಂದ ಪರಿಹಾರದ ಮೊತ್ತವನ್ನು ನಿಗಧಿಪಡಿಸಬೇಕಿದೆ. ಇಲ್ಲಿಯವರೆಗೂ ಮರಗಳನ್ನು ಬೆಳೆಯಲು ತಗುಲಿರುವ ವೆಚ್ಚದೊಂದಿಗೆ, ಹೆಚ್ಚುವರಿಯಾಗಿ ಅವರ ಪ್ರಯತ್ನವನ್ನು ಗುರುತಿಸುವ ಸಲುವಾಗಿ ಹಾಗೂ ಕೃಷಿವನದ ವಿಚಾರವನ್ನು ಸಾರ್ವಜನಿಕವಾಗಿ ಪ್ರಚಾರ ಪಡಿಸಿರುವುದಕ್ಕಾಗಿ ನೀಡಬೇಕಿದೆ. ಈ ಹೆಚ್ಚುವರಿ ಮೊತ್ತವು ಇದುವರೆಗೂ ಮರಗಳನ್ನು ಬೆಳೆಯಲು ತಗಲಿರುವ ವೆಚ್ಚಕ್ಕನುಗುಣವಾಗಿ ಅಥವಾ ದುಪ್ಪಟ್ಟು ಹಣವನ್ನು ಇದುವರೆಗೂ ಬೆಳೆಸಿ, ಕಾಪಾಡಿದ್ದಕ್ಕಾಗಿ ನೀಡಬೇಕಿದೆ.

# ಕೃಷಿ ಭೂಮಿಯಲ್ಲಿ ಸಾಗುವಾನಿ (TEAK)

**ದೀಪಕ್ ಶರ್ಮ**, ಭಾ.ಅ.ಸೇ (ನಿ) ಮೊ: 99862 32094 ಹಾಗೂ **ಶಿವಾನಂದಮೂರ್ತಿ**, ಭಾ.ಅ.ಸೇ (ನಿವೃತ್ತ), ಮೊ: 94481 26246

ಕರ್ನಾಟಕ ಪಶ್ಚಿಮ ಘಟ್ಟಗಳ ಪ್ರದೇಶದ ಬಹುಭಾಗದಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಸಾಗುವಾನಿಯು ಎರಡು ವಿಧದ ಎಲೆಯುದುರುವ ಸುಂದರ ತೇವಾಂಶಭರಿತ ಮತ್ತು ಒಣ ಅರಣ್ಯ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಕೆಲವು ದಶಕಗಳ ಹಿಂದೆ ನೈಸರ್ಗಿಕ ಅರಣ್ಯಗಳಿಗೆ ಹೊಂದಿಕೊಂಡಂತೆ ಇರುವ ಕೃಷಿ ಭೂಮಿಯಲ್ಲಿ ಸಾಗುವಾನಿ ಬೆಳೆಯುತ್ತಿರುವುದು ಸಾಮಾನ್ಯ ದೃಶ್ಯವಾಗಿತ್ತು. ಈ ಎಲ್ಲಾ ಭೂ ಪ್ರದೇಶಗಳು ಮೂಲತಃ ಮರಗಳ ಹೊದಿಕೆಯಿಂದ ಕೂಡಿದ್ದು, ಸಾಗುವಾನಿ ಮರಗಳು ಇತರೆ ಗಟ್ಟಿ ಜಾತಿಯ ಮರಗಳಾದ ಅಂದರೆ ಮತ್ತಿ, ನಂದಿ, ಕಿಂದಳ್, ಹೊನ್ನೆ, ಬೀಟೆ, ಹೆದ್ದಿ, ದಿಂಡಲ್ ಇತ್ಯಾದಿಗಳ ಸಹವರ್ತಿಯಾಗಿ ಬೆಳೆಯುತ್ತಿದ್ದವು. ವರ್ಷಗಳು ಕಳೆದಂತೆ ಈ ಭೂಮಿಯನ್ನು ಕೃಷಿ ಅಭಿವೃದ್ಧಿ ಪಡಿಸಲು ಬಳಸಿಕೊಂಡಿದ್ದರ ಪರಿಣಾಮ ಬಹಳಷ್ಟು ಮರಗಳನ್ನು ಕಡಿದು, ತೆರವುಗೊಳಿಸಲಾಯಿತು.ಆದರೆ ಮರಗಳಿರುವ ಕೆಲವು ಕೃಷಿ ಭೂಮಿಯ ಭಾಗಗಳನ್ನು ತಕ್ಷಣವೆ ಕೃಷಿಗೆ ಬಳಸಿಕೊಳ್ಳಲಾಗದ ಭೂ ಪ್ರದೇಶಗಳಲ್ಲಿ ಮರಗಳನ್ನು ಹಾಗೆಯೇ ಉಳಿಸಿಕೊಳ್ಳಲಾಯಿತು. ಈ ಮರಗಳಲ್ಲಿ ಸಾಗುವಾನಿ ಮರಕ್ಕೆ ಹೆಚ್ಚಿನ ಬೇಡಿಕೆಯಿತ್ತು ಮತ್ತು ಇದೊಂದು ರೈತರಿಗೆ ಮುಖ್ಯವಾದ ಆದಾಯದ ಮೂಲವಾಗಿತ್ತು. ಸಾಗುವಾನಿಯ (ಟೀಕ್) ಪೋಲ್ಸ್ ಪ್ರದೇಶಗಳಾದ ಹಳಿಯಾಳ, ಧಾರವಾಡ, ಮುಂಡಗೋಡ, ಕಲಘಟಗಿ ಮುಂತಾದೆಡೆ ರೈತರು ಸಾಮಾನ್ಯವಾಗಿ ಕೃಷಿ ಭೂಮಿಯ ಕೆಲವು ಭಾಗಗಳನ್ನು ಮರಗಳಿಗಾಗಿಯೇ ಮೀಸಲಿಡುತ್ತಿದ್ದರು ಹಾಗೂ ಅವುಗಳನ್ನು ಪ್ರತಿ 10 ರಿಂದ 12 ವರ್ಷಗಳಿಗೊಮ್ಮೆ ಕಟಾವು ಮಾಡಿ, ಮಾರಾಟ ಮಾಡುತ್ತಿದ್ದರು. ಈ ಮರಗಳು ಉತ್ತಮವಾದ ಕೂಳೆ ಬೆಳೆಯನ್ನು (Coppicers) ನೀಡುವುದರಿಂದ ಉತ್ತಮವಾಗಿ ಬೆಳೆದಂತಹ ಪೋಲ್ಸ್ ಮತ್ತು ಸಣ್ಣ ಮರಮುಟ್ಟುಗಳನ್ನು ನಿಗಧಿತ ಅವಧಿಯಲ್ಲಿ ಕಟಾವು ಮಾಡಲಾಗುತ್ತಿತ್ತು. ಹೇಳಬೇಕೆಂದರೆ, ಗ್ರಾಮೀಣ ಭಾಗದ ಜನರ ಬೇಡಿಕೆಗಳಾದ ಮರಮುಟ್ಟು ಮತ್ತು ಉರುವಲಿನ ಬೇಡಿಕೆಗಳನ್ನು ಈ ಮೂಲಕ ಪೂರೈಸಲಾಗುತ್ತಿತ್ತು. ಆದರೆ ಕಳೆದ ಎರಡು ಮೂರು ದಶಕಗಳ ಕೃಷಿ ವಿಸ್ತರಣೆಯು ಅದರಲ್ಲೂ ವಿಶೇಷವಾಗಿ ವಾಣಿಜ್ಯ ಬೆಳೆಗಳಾದ ಹತ್ತಿ, ಮಾವು ಮುಂತಾದ ಬೆಳೆಗಳನ್ನು ಬೆಳೆಯಲು ನೈಸರ್ಗಿಕವಾಗಿ ಬೆಳೆದಿದ್ದ ಮರಗಳ ಕಣ್ಮರೆಯಾದವು. ಇದರಿಂದ ಆ ಪ್ರದೇಶದಲ್ಲಿಯ ನೈಸರ್ಗಿಕ ಅರಣ್ಯಗಳ ಮೇಲೆ ಒತ್ತಡ ಹೆಚ್ಚಿಗೆಯಾಯಿತು. ಕೆಲವು ರೈತರು ಸಾಗುವಾನಿ ಸಸಿಯ ಸ್ಟಂಪ್‌ಗಳನ್ನು ಸಮೀಪದ ಅರಣ್ಯ ಸಸ್ಯಕ್ಷೇತ್ರಗಳಿಂದ ಪಡೆದು, ಅವರ ಜಮೀನುಗಳಲ್ಲಿ ಬೆಳೆಯಲಾಗುತ್ತಿತ್ತು. ಆದರೆ ಆ ಸಂದರ್ಭದಲ್ಲಿ ಅರಣ್ಯ ಸಸ್ಯಕ್ಷೇತ್ರಗಳಲ್ಲಿ ವಿಶೇಷವಾಗಿ ಸಾಗುವಾನಿ ಸ್ಟಂಪ್‌ಗಳ ಬೆಳೆಸುವ ಕಾರ್ಯಕ್ರಮವಿಲ್ಲದೆಯಿದ್ದರಿಂದ ಬಹಳ ಕಡಿಮೆ ಸಂಖ್ಯೆಯನ್ನೂ ರೈತರಿಗೆ/ಜನಸಾಮಾನ್ಯರಿಗೆ ಬೆಳೆಸಲು ಪೂರೈಸಲಾಗುತ್ತಿತ್ತು.

ಅದೃಷ್ಟವಶಾತ್, ಅರಣ್ಯ ಇಲಾಖೆಯು 1980ರ ಮಧ್ಯದಲ್ಲಿ ಕೃಷಿ ಅರಣ್ಯ ಮತ್ತು ಫಾರಂ ಫಾರೆಸ್ಟ್ರಿ ಕಾರ್ಯಕ್ರಮಗಳ ಅಡಿ ವಿವಿಧ ಜಾತಿಯ ಮರಗಳ ಸಸಿಗಳನ್ನು ಬೆಳೆಸಿ ಸಾರ್ವಜನಿಕರಿಗೆ ಪೂರೈಸಲು ಪ್ರಾರಂಭಿಸಿತು.ಅದರಿಂದ ರೈತರು ಸಹ ಆಸಕ್ತಿ ವಹಿಸಿ ಮರ ಗಿಡಗಳನ್ನು ಅವರ ಜಮೀನಿನಲ್ಲಿ ಮತ್ತು ಸುತ್ತಲೂ ವಿಶೇಷವಾಗಿ ಬದುಗಳ ಮೇಲೆ ಬೆಳೆಸಲು ಪ್ರಾರಂಭಿಸಿದರು. ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ಮರ ಗಿಡ ನೆಡುವುದನ್ನೂ ಕೃಷಿವನ ಮತ್ತು ಫಾರಂ ಫಾರೆಸ್ಟ್ರಿ ಯೋಜನೆಯಡಿ ಬೆಳೆಸುವ ಕಾರ್ಯಕ್ರಮವನ್ನೂ ಬಿರುಸುಗೊಳಿಸಲಾಯಿತು. ಮರ ಮುಟ್ಟುಗಳನ್ನು ನೀಡುವ ಮರಗಳಾದ ಸಾಗುವಾನಿ, ಸಿಲ್ವರ್ ಓಕ್ (Grevillea robusta) ಮತ್ತು ಹೆಬ್ಬೇವು (Melia dubia) ಮರಗಳು ಹೆಚ್ಚು ಜನಪ್ರಿಯವಾದವು. ಅದರಲ್ಲೂ ಕರ್ನಾಟಕದ ದಕ್ಷಿಣ ಭಾಗದ ಒಳನಾಡಿನಲ್ಲಿ ಹೆಬ್ಬೇವು ಬೆಳೆಸುವುದು ಹೆಚ್ಚು ಜನಪ್ರಿಯವಾಯಿತು ಮತ್ತು ಕಾಫಿ ಬೆಳೆಯುವ ಜಿಲ್ಲೆಗಳಲ್ಲಿ ಸಿಲ್ವರ್ ಓಕ್ ಮರಗಳು ಹೆಚ್ಚು ಪ್ರಸಿದ್ಧಿ ಪಡೆದವು ಹಾಗೂ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಸಾಗುವಾನಿಯು ಹೆಚ್ಚು ಜನ ಮನ್ನಣೆ ಗಳಿಸಿತು. ಇತರೆ ಜಾತಿಯ ಮರಗಳಾದ ಬೇವು (Melia azadirachta), ಮಹೋಗನಿ (Swietenia macrophylla / mahagoni) ಮತ್ತು ಅಕೇಶಿಯಾ (Acacia auriculifermis) ಇವುಗಳ ಸಹ ಸ್ವಲ್ಪ ಬೇಡಿಕೆಯುಳ್ಳ ಮರಗಳಾಗಿವೆ. ವಿಶೇಷವಾಗಿ ಅಕೇಶಿಯಾವನ್ನೂ ರಾಜ್ಯದ ತೀರ ಪ್ರದೇಶದ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಸಲಾಗುತ್ತಿದೆ. ಆದರೆ ಸಾಗುವಾನಿ ಮರವು ಹೆಚ್ಚು ಬೇಡಿಕೆಯುಳ್ಳ ಜಾತಿಯ ಮರವಾಗಿದ್ದು ಮುಂಬರುವ ವರ್ಷಗಳಲ್ಲೂ ಈ ಮರಕ್ಕೆ ಬೇಡಿಕೆಯು ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ.

ಕೃಷಿ ವನದಲ್ಲಿ ಸಾಗುವಾನಿ ಮರವು ಹೆಚ್ಚು ಜನಪ್ರಿಯವಾಗಿದ್ದು, ರಾಜ್ಯದಲ್ಲಿ ಒಂದು ಉತ್ತಮವಾದ ಕೃಷಿ ವನದ / ಫಾರಂ ಫಾರೆಸ್ಟ್ರಿ ಜಾತಿಯ ಮರವಾಗಿರುವುದು ಆಶಾದಾಯಕ ಬೆಳವಣಿಗೆಯಾಗಿರುತ್ತದೆ. ಸಾಗುವಾನಿಯು ಕರ್ನಾಟಕ ರಾಜ್ಯದಲ್ಲಿ ನೈಸರ್ಗಿಕವಾಗಿ ಬೆಳೆಯುವ ಮರವಾಗಿದ್ದು, ಇದು ರಾಜ್ಯದ ಎಲ್ಲಾ ಜಿಲ್ಲೆಗಳ ಅರಣ್ಯ ಪ್ರದೇಶಗಳಲ್ಲಿ ಬೆಳೆಯುವ ಮರವಾಗಿದೆ. ಇದರಿಂದ ತಿಳಿದು ಬರುವುದೇನೆಂದರೆ ಈ ಮರಗಳನ್ನು ರಾಜ್ಯದ ಎಲ್ಲಾ ಕೃಷಿ ವಲಯಗಳ (ಅಗ್ರೊ ಕ್ಲೈಮೇಟಿಕ್) ಪ್ರದೇಶಗಳಲ್ಲಿ ಬೆಳೆಯಲು ಪ್ರಶಸ್ತವಾಗಿದ್ದು ಇದನ್ನು ಹೆಚ್ಚಾಗಿ ಬೆಳೆಸುವುದರಿಂದ, ದೊಡ್ಡ ಗಾತ್ರದ ಅಂದರೆ 1.5 ರಿಂದ 1.6 ಮೀ ದಪ್ಪವುಳ್ಳ (ಗರ್ತ್) ಮರದ ದಿಮ್ಮಿಗಳನ್ನು ನಾಟಿ ಮಾಡಿದ 35 ವರ್ಷಗಳಲ್ಲಿ ಪಡೆಯಬಹುದು.

ಕೃಷಿವನ / ಫಾರಂ ಫಾರೆಸ್ಟ್ರಿಯಲ್ಲಿ ಬೆಳೆಸಲು ಸಾಗುವಾನಿ, ಸಿಲ್ವರ್ ಓಕ್ ಮತ್ತು ಹೆಬ್ಬೇವಿನ ಮರಗಳು ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದ ಮರಗಳಾಗಿದ್ದು, ಸಿಲ್ವರ್ ಓಕ್ ಮತ್ತು ಹೆಬ್ಬೇವಿನ ಮರಗಳ ಕಟಾವಿಗೆ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ (KPTA), 1976ರನ್ವಯ ಯಾವುದೇ ಅನುಮತಿ ಬೇಕಾಗಿರುವುದಿಲ್ಲ. ಇದರ ಜೊತೆಗೆ ಈ ಎರಡೂ ಜಾತಿಯ ಮರಗಳ ಸಾಗಾಣಿಕೆಗೆ ಕರ್ನಾಟಕ ಅರಣ್ಯ ರೂಲ್ಸ್, 1969ರನ್ವಯ ಅರಣ್ಯ ಇಲಾಖೆಯ ಅನುಮತಿಯಿಂದ ವಿನಾಯತಿ ನೀಡಲಾಗಿದೆ. ಕರ್ನಾಟಕ ಅರಣ್ಯ ಇಲಾಖೆಯು ನೀಡಿರುವ ಈ ಎರಡೂ ವಿನಾಯ್ತಿಯಿಂದ ರೈತರು ಅವರ ಜಮೀನುಗಳಲ್ಲಿ ಸಿಲ್ವರ್ ಓಕ್ ಮತ್ತು ಹೆಬ್ಬೇವಿನ ಮರಗಳನ್ನೂ ಬೆಳೆಯಲು ಹೆಚ್ಚು ಆಸಕ್ತಿ ವಹಿಸಿರುವುದು ಕಂಡು ಬಂದಿದೆ. ಈ ಎರಡೂ ಕಾನೂನಿಂದ ವಿನಾಯತಿ ನೀಡಿರುವುದರಿಂದ ರೈತರಿಗೆ ಅವರು ಬೆಳೆಸಿದ ಮರದ ದಿಮ್ಮಿಗಳು





ಕೃಷಿಅರಣ್ಯದ ತೇಗದ ಮರದಲ್ಲಿ ಕೆತ್ತನೆ.

ಮತ್ತು ಉರುವಲು ಕಟ್ಟಿಗೆಯ ಸಾಗಾಣಿಕೆಗೆ ಅನುಕೂಲವಾಗಿರುತ್ತದೆ. ಸಾಗುವಾನಿ ಮರಕ್ಕೆ ಸಂಬಂಧಿಸಿದಂತೆ KPTA ಕಾಯ್ದೆ 1976ರ ಸೆಕ್ಷನ್–8ರ ಪ್ರಕಾರ ಮರ ಕಟಾವಿಗೆ ಇಲಾಖೆಯ ಪೂರ್ವಾನುಮತಿಯಲ್ಲಿ ಮಲೆನಾಡು / ಪಶ್ಚಿಮ ಘಟ್ಟ ಪ್ರದೇಶದಲ್ಲಿಬೇಕಾಗಿರುವುದು. ಒಳನಾಡು ಕರ್ನಾಟಕ (ಅರೆ ಮಲೆನಾಡು) ಮತ್ತು ಪೂರ್ವ ಮೈದಾನ ಪ್ರದೇಶಗಳಲ್ಲಿ (ಪಟ್ಟಣ ನಗರ ಪ್ರದೇಶಗಳನ್ನೂ ಹೊರೆತುಪಡಿಸಿ) ಮರಗಳ ಕಟಾವಿಗೆ ಇಲಾಖೆಯ ಪೂರ್ವಾನುಮತಿಯಿಂದ ವಿನಾಯತಿ ನೀಡಲಾಗಿದೆ. ಆದರೆ ಸಾಗಾಣಿಕೆ ಮಾಡಲು ಅರಣ್ಯ ಇಲಾಖೆಯಿಂದ ರಹದಾರಿ ಪಡೆಯುವುದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಅತ್ಯಾವಶ್ಯಕವಾಗಿದೆ. ಸಾಗುವಾನಿ ಮರವು ರಾಜ್ಯದ ಕೃಷಿ ವನದಲ್ಲಿ ಬೆಳೆಯುವ ಹೆಚ್ಚು ಪ್ರಸಿದ್ಧಿ ಪಡೆದಿರುವ ಮರ ಹಾಗೂ ಇದರ ಟಿಂಬರ್ (ಮರದ ದಿಮ್ಮಿಗಳು)ಗೆ ಇರುವ ಹೆಚ್ಚಿನ ಬೆಲೆಯುಳ್ಳದ್ದಾಗಿರುವುದರಿಂದ, ಇರುವ ಎಲ್ಲಾ ಸಮಸ್ಯೆಗಳ ನಡುವೆಯೂ ಜನರು ಹೆಚ್ಚು ಆಸಕ್ತಿ ಮತ್ತು ಗೌರವದಿಂದ ಬೆಳೆಸುತ್ತಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸ್ವಾಭಾವಿಕವಾಗಿ ಸಾಗುವಾನಿ ಮರಗಳು ಬೆಳೆಯುತ್ತಿದ್ದರೂ, ಮರಗಳು ಕಟಾವಿಗೆ ಯೋಗ್ಯತೆ ಪಡೆಯುವುದು ಅಂದರೆ ದೊಡ್ಡ ಗಾತ್ರದ್ದಾಗಿರುವುದು ಪಶ್ಚಿಮ ಘಟ್ಟಗಳು ಅಥವಾ ಮಲೆನಾಡು ಪ್ರದೇಶಗಳಲ್ಲಿ ಮಾತ್ರ. ಒಳಭಾಗದ ಕರ್ನಾಟಕ ಅಂದರೆ ಅರೆ ಮಲೆನಾಡು ಮತ್ತು ಪೂರ್ವ ಮೈದಾನ ಪ್ರದೇಶಗಳಲ್ಲಿ ಬೆಳೆಯುವ ಸಾಗುವಾನಿ ನಿರೀಕ್ಷಿತ ಗಾತ್ರದಲ್ಲಿ ಬೆಳೆಯದೇ ಇರುವುದರಿಂದ ಕಟಾವಿನ ಯೋಗ್ಯತೆ ಪಡೆಯದೇ ಇರುವುದರಿಂದ, ಇಂತಹ ಮರಗಳು ಪ್ರದೇಶಗಳ ಕೃಷಿ ಜಮೀನಿನಲ್ಲಿ ಬೆಳೆಯುವ ಸಾಗುವಾನಿ ಮರಗಳ ಸಾಗಾಣಿಕೆಗೆ ಈಗಿರುವ ಇಲಾಖೆಯಿಂದ ರಹದಾರಿ ಪಡೆಯುವ ಕ್ರಮವನ್ನೂ ಸಡಿಲಗೊಳಿಸುವ ಅವಶ್ಯಕತೆಯಿದೆ ಮತ್ತು ಇದರಿಂದ ಅರಣ್ಯಗಳಲ್ಲಿ ನೈಸರ್ಗಿಕವಾಗಿ ಬೆಳೆಯುತ್ತಿರುವ ಸಾಗುವಾನಿ ಮರಗಳ ಮೇಲೆ ಯಾವುದೇ ದುಷ್ಪರಿಣಾಮ ಬೀರಲಾರದು ಹಾಗೂ ಹೇಳಬೇಕೆಂದರೆ ಈ ರೀತಿಯ ಇಲಾಖೆಯ ಉದಾರ ಮನೋಭಾವನೆಯು ರೈತರು ಇನ್ನೂ ಹೆಚ್ಚಿನ ರೀತಿಯಲ್ಲಿ ಸಾಗುವಾನಿ ಮರಗಳನ್ನೂ ಬೆಳೆಸಲು ಉತ್ತೇಜಿತರಾಗುವರು. ಅರಣ್ಯ ಇಲಾಖೆಯ ಈ ರೀತಿಯ ಉದಾತ್ತ ಮತ್ತು ರೈತ ಪರವಾದ ಧೋರಣೆಯು, ಕೃಷಿವನದಲ್ಲಿ / ಫಾರಂ ಫಾರೆಸ್ಟ್ರಿಯಲ್ಲಿ ಸಾಗುವಾನಿ ಬೆಳೆಸಲು ಪ್ರೋತ್ಸಾಹಿಸುವುದರಿಂದ ಧೀರ್ಘಕಾಲದಿಂದಲೂ ಮರಗಳ ಕೊರತೆಯನ್ನು ಎದುರಿಸುತ್ತಿರುವ ರಾಜ್ಯದ ಪ್ರದೇಶಗಳಲ್ಲಿ ಲಾಭವನ್ನುಂಟು ಮಾಡಲಿದೆ. ಈಗಿರುವಂತೆ ಅರಣ್ಯ ಇಲಾಖೆಯಿಂದ ಸಾಗಾಣಿಕೆ / ರಹದಾರಿಗೆ ಅನುಮತಿ ಪಡೆಯಲು ಸಾಕಷ್ಟು ಸಮಯ ತೆಗೆದುಕೊಳ್ಳಲಿರುವುದರಿಂದ ಮತ್ತು ಈ ರೀತಿಯ ಗೊಂದಲಮಯವಾದ ವಿಧಾನಗಳು ರೈತರು ಅವರ ಜಮೀನುಗಳಲ್ಲಿ / ಖಾಸಗಿ ಭೂಮಿಯಲ್ಲಿ ಸಾಗುವಾನಿ ಮರಗಳನ್ನು ಬೆಳೆಯಲು ನಿರುತ್ತೇಜನರಾಗುವರು.ಅಲ್ಲದೆ ರಾಜ್ಯದ ಮೈದಾನ, ಅರೆಮಲೆನಾಡು ಪ್ರದೇಶಗಳಲ್ಲಿ ನರ್ಸರಿ ಕಾರ್ಯಕ್ರಮಗಳ ವಿಸ್ತರಣೆ ಮಾಡುವ ಅವಶ್ಯಕತೆಯಿದೆ. ಇದರಿಂದ ರೈತರ ಬೇಡಿಕೆಗನುಗುಣವಾಗಿ ಸಾಗುವಾನಿ ಸಸಿ / ಸ್ಟಂಪ್‌ಗಳನ್ನೂ ಪೂರೈಸಲು ಸಾಧ್ಯವಾಗುವುದು.ಈಗಿರುವಂತೆ ರೈತರಿಗೆ ಸಾಗುವಾನಿ ಸಸಿಗಳನ್ನು ಇಲಾಖಾ ಸಸ್ಯಕ್ಷೇತ್ರದಲ್ಲಿನ ಮಿತಿಯೊಂದಿಗೆ ಸರಬರಾಜು ಮಾಡುತ್ತಿರುವುದು, ರೈತರ ಬೇಡಿಕೆಯಂತೆ ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ ಅಥವಾ ಅತ್ಯಲ್ಪ ಪ್ರಮಾಣದ ಸಸಿಗಳನ್ನೂ ಪೂರೈಸಲಾಗುತ್ತಿದೆ.

ಈ ಮೇಲೆ ಹೇಳಿರುವ ಇಲಾಖೆಯ ಎರಡು ಧೋರಣೆಗಳು ಅರೆ ಮಲೆನಾಡು ಮತ್ತು ಪೂರ್ವ ಮೈದಾನ ಪ್ರದೇಶದಲ್ಲಿ ಸಾಗುವಾನಿ ಮರ ಬೆಳೆಸಲು ಪ್ರೋತ್ಸಾಹ ದೊರೆಯುವುದರೊಂದಿಗೆ, ರೈತರ ಆರ್ಥಿಕ ಸ್ಥಿತಿಯನ್ನೂ ಹೆಚ್ಚಿಸಿದಂತಹ ಹಾಗೂ ಪರಿಸರ ಸಮತೋಲನ ಪುಣ್ಯದ ಕೆಲಸಕ್ಕೆ ಇಲಾಖೆಯು ಕೈ ಜೋಡಿಸಿದಂತಾಗುವುದು.

---

ಪುಟ 4ರಿಂದ ಸಂಪಾದಕೀಯ ಮುಂದುವರಿಕೆ...

ಈ ಸಂಸ್ಥೆಗಳು ಸ್ವತಂತ್ರವಾಗಿ ಸ್ಥಳೀಯ ರೈತರೊಂದಿಗೆ ವ್ಯವಹರಿಸುವುದರಿಂದ, ಕೃಷಿಅರಣ್ಯಗಳ ಉತ್ಪನ್ನಗಳನ್ನು ಬೆಳೆದ ನಂತರದಲ್ಲಿ ಖರೀದಿಸುವ ಮತ್ತು ಮಾರಾಟದ ವ್ಯವಸ್ಥೆ ಮಾಡುವುದರಿಂದ, ಇವುಗಳಿಗೆ ಹೆಚ್ಚಿನ ಬೆಲೆ ದೊರೆಯುವುದು. ಇದಕ್ಕೆ ಕೃಷಿಅರಣ್ಯಗಳ ಸಬ್ ಮಿಶನ್ ಯೋಜನೆಯಿಂದ ಅವಶ್ಯಕವಾದ ಸಹಾಯವು ಈ ಮೇಲಿನ ಎಲ್ಲಾ ಅಂಶಗಳಿಗೆ ದೊರೆಯಬೇಕಿದೆ.

ದತ್ತಾಂಶ ಹಾಗೂ ಮಾಹಿತಿ ಸಂವಹನ ವ್ಯವಸ್ಥೆಯು ಬಲಿಷ್ಟವಾಗಿರಬೇಕು ಹಾಗೂ ವಿಚಾರಗಳಿಗೆ ಮಾಹಿತಿ ತಂತ್ರಾಂಶ ವ್ಯವಸ್ಥೆಯು ಕೃಷಿಅರಣ್ಯ ಸಬ್ ಮಿಶನ್‌ನಲ್ಲಿ ಕೈಗೊಳ್ಳುವ ಕೆಲಸಗಳಿಗಷ್ಟೆ ಸೀಮಿತವಾಗದೆ, ಜಿಲ್ಲಾವಹಿ ಸಂಪೂರ್ಣವಾದ ಮಾಹಿತಿಯು ಕೃಷಿಅರಣ್ಯದ ಎಲ್ಲಾ ವಿಚಾರಗಳಿಗಿರಬೇಕು. ಈ ವಿಚಾರವನ್ನು ಕೃಷಿ ಬೆಳೆ ಸಮೀಕ್ಷೆಯೊಡನೆ ನಿರ್ವಹಣೆ ಮಾಡಬೇಕು ಹಾಗೂ ಆರ್.ಟಿ.ಸಿ.ಯಲ್ಲಿ ನಮೂದಿಸಬೇಕಿದೆ. ಇದರಿಂದ ಕೃಷಿಅರಣ್ಯ ಬೆಳೆಯುವ ರೈತರು ಎದುರಿಸುತ್ತಿರುವ ಸಮಸ್ಯೆಯನ್ನು ಪರಿಹರಿಸಬಹುದು. ತನ್ಮೂಲಕ ರಾಜ್ಯದಲ್ಲಿ ಕೃಷಿಅರಣ್ಯದಿಂದ ಮರಗಳ ಹೊದಿಕೆಯನ್ನು ಹೆಚ್ಚಿಸಲು ಸಾಧ್ಯವಾಗುವುದು. ಆದ್ದರಿಂದ ಕರ್ನಾಟಕದಲ್ಲಿ ಕೃಷಿಅರಣ್ಯದ ಬಗ್ಗೆ ಪ್ರತ್ಯೇಕ ನೀತಿ, ಶ್ರೀಗಂಧವೂ ಸೇರಿದಂತೆ ರಚಿಸುವುದು ಸೂಕ್ತವಾಗಿದೆ. ಏಕೆಂದರೆ ಶ್ರೀಗಂಧವು ಸಹ ಕೃಷಿಅರಣ್ಯದ ಭಾಗವಾಗಿರುವುದರಿಂದ. ಶ್ರೀಗಂಧಕ್ಕೆ ವಿಶೇಷವಾಗಿ ರಕ್ಷಣೆಯ ಬಗ್ಗೆ ಹೆಚ್ಚಿನ, ಮರಗಳ ಕಟಾವು, ಸ್ವಚ್ಛಗೊಳಿಸುವುದು (ಪರಿವರ್ತಿಸುವುದು), ಗ್ರೇಡಿಂಗ್ ಮಾಡುವುದು ಮತ್ತು ಮಾರುಕಟ್ಟೆ ವ್ಯವಸ್ಥೆಯ ಬಗ್ಗೆ ಸಹ ಕೃಷಿಅರಣ್ಯ ನೀತಿಯಲ್ಲಿ ವಿಶೇಷವಾದ ಗಮನವಹಿಸಬೇಕಿದೆ.

ಬೀಟೆ ಮರ (Rosewood) ಸಹ ಮತ್ತೊಂದು ಅಮೂಲ್ಯವಾದ ಮರವಾಗಿದ್ದು, ಇತ್ತೀಚೆಗೆ ಕಾಫೀ ತೋಟಗಳಲ್ಲಿ ಮರವನ್ನು ಬೆಳೆಸುವುದು ತುಂಬಾ ಕಡಿಮೆಯೆನಿಸುತ್ತದೆ. ಆದ್ದರಿಂದ ಇದರ ಬೆಳವಣಿಗೆ, ವರ್ಗೀಕರಣ ಮತ್ತು ಮಾರುಕಟ್ಟೆಯ ನಿಟ್ಟಿನಲ್ಲಿ ವಿಶೇಷವಾದ ನಿಗಾ ವಹಿಸಬೇಕಿದೆ. ಸದ್ಯದ ಪರಿಸ್ಥಿತಿಯಲ್ಲಿ ಕೃಷಿಅರಣ್ಯದ ವಿಷಯವು ವಿವಿಧ ಇಲಾಖೆಗಳು ಅಂದರೆ ಕೃಷಿ, ಅರಣ್ಯ, ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗಳಲ್ಲಿ ನಿರ್ವಹಿಸಲಾಗುತ್ತಿದೆ. ಆದ್ದರಿಂದ ಈ ವಿಷಯವನ್ನು ಯಾವುದಾದರೂ ಒಂದು ಇಲಾಖೆಯು ನಿರ್ವಹಿಸುವುದು ಅಥವಾ ರಾಜ್ಯಮಟ್ಟದಲ್ಲಿ ಒಂದು ವಿವಿಧ ಇಲಾಖೆಗಳ ಸಮನ್ವಯ ಸಮಿತಿ ರಚಿಸುವುದು ಸೂಕ್ತವಾಗಿದೆ. ಈ ಸಮಿತಿಯು ಕೃಷಿಅರಣ್ಯ ಬೆಳೆಯುವ ರೈತರು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೂ ಸ್ಪಂದಿಸಬೇಕಿದೆ. ಆದ್ದರಿಂದ ಭಾರತ ಸರ್ಕಾರವು ಕೃಷಿಅರಣ್ಯದ ಸಬ್ ಮಿಶನ್ ಯೋಜನೆಯನ್ನು 'ರಾಷ್ಟ್ರೀಯ ಕೃಷಿಅರಣ್ಯದ ಮಿಶನ್'ನ ಮಾದರಿಯಲ್ಲಿ 'ರಾಷ್ಟ್ರೀಯ ಸುಸ್ಥಿರ ಕೃಷಿಮಿಶನ್' ಅಡಿ ಅಥವಾ 'ರಾಷ್ಟ್ರೀಯ ತೋಟಗಾರಿಕಾ ಮಿಶನ್'ನ್ನು ಕೃಷಿ ಮಂತ್ರಾಲಯ ಮತ್ತು ರೈತ ಕಲ್ಯಾಣ ಮಂತ್ರಾಲಯದಡಿ ನಿರ್ವಹಿಸುವುದು ಸೂಕ್ತವಾಗಿದೆ.

# 19 ಡಿಸೆಂಬರ್ 2021ರಿಂದ ಮಾರ್ಚ್ 2022ರ ಮಾಹೆಗಳಲ್ಲಿ ನಡೆದ ಕಾರ್ಯಕ್ರಮಗಳು

**ಕಾರ್ಯದರ್ಶಿ: ಹೆಚ್.ಜಿ. ಶಿವಾನಂದಮೂರ್ತಿ**, ಭಾ.ಅ.ಸೇ (ನಿ) ಮೊ: 94481 26246

1. ದಿ:19–12–2021ರಂದು 8ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ಅಕ್ಟೋಬರ್–ಡಿಸೆಂಬರ್ 2021ರ ಕೃಷಿವನ ತ್ರೈಮಾಸಿಕ ವಾರ್ತಾಪತ್ರ ಸಂಪುಟ–3, ಸಂಚಿಕೆ–4ನ್ನು ಬಿಡುಗಡೆ ಮಾಡಲಾಯಿತು. ಇದೇ ವೇಳೆ ನೂತನ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗೆ ಚುನಾವಣೆಯನ್ನು ನಡೆಸಲಾಯಿತು. ಡಾ. ಕೆ.ಹೆಚ್. ವಿನಯ್‌ಕುಮಾರ್, ಭಾ.ಅ.ಸೇ.(ನಿ) ಇವರು ಚುನಾವಣಾ ಪ್ರಕ್ರಿಯೆಯನ್ನು ನಡೆಸಿಕೊಟ್ಟರು.

2. ದಿ:28–12–2021ರಂದು ನೂತನ ಕಾರ್ಯಕಾರಿ ಸಮಿತಿ ಹಾಗೂ ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯರು ಸೇರಿ ಜಂಟಿ ಸಭೆಯನ್ನು ನಡೆಸಲಾಯಿತು.

2. ದಿ: 28/12/2021ರಂದು ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ನಾಲ್ಕನೆ ವಲಯ, ಬೆಂಗಳೂರು ನಗರ ಜಿಲ್ಲೆ, 8ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ 2020–21ನೇ ಸಾಲಿನ ಲೆಕ್ಕಪತ್ರಗಳು, ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿ ದಿ: 14–01–2022ರಂದು ಸ್ವೀಕೃತಿ ಪಡೆಯಲಾಗಿದೆ.

3. ದಿ: 05–01–2022ರಂದು ಮಾನ್ಯ ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರಾದ ಶ್ರೀ ಉಮೇಶ್ ಕತ್ತಿ ಅವರನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಜಯ್ ಮಿಶ್ರ, ಕಾರ್ಯದರ್ಶಿ ಹೆಚ್.ಜಿ. ಶಿವಾನಂದಮೂರ್ತಿ, ಸದಸ್ಯರಾದ ಶ್ರೀ ಎ.ಬಿ. ಪಾಟೀಲ್, ಶ್ರೀ ಮಲ್ಲೇಶ್ ಲಿಂಗಾಚಾರ್ ಹಾಗೂ ಶ್ರೀ ಎ.ಎಂ. ಅಣ್ಣಯ್ಯ ರವರು ಭೇಟಿ ಮಾಡಿ ರೈತರು ತಮ್ಮ ಕೃಷಿಭೂಮಿಯಲ್ಲಿ ಬೆಳೆದ ಕೃಷಿಅರಣ್ಯ ಮರಗಳನ್ನು ಕಡಿಯುವುದು, ಸಾಗಾಣಿಕೆ ಮತ್ತು ಮಾರಾಟ ಕುರಿತಂತೆ ಕಾನೂನನ್ನು ಸರಳೀಕರಣ ಮಾಡುವುದು ಹಾಗೂ ಶ್ರೀಗಂಧ ನೀತಿ 2021 ನ್ನು ಕುರಿತು ವಿಧಾನಸೌಧದ ಸಚಿವರ ಕಛೇರಿಯಲ್ಲಿ ಚರ್ಚಿಸಲಾಯಿತು.

4. ದಿ: 10–01–2022ರಂದು ಮಾನ್ಯ ಸಚಿವರ ಜೊತೆಯಲ್ಲಿ ದಿ:05–01–2022ರಂದು ಚರ್ಚಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಲಿಖಿತ ಶಿಫಾರಸ್ಸನ್ನು ವಿಶೇಷ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಸಿದ್ಧಪಡಿಸಿದ ಶ್ರೀಗಂಧ ನೀತಿ 2021 ಮತ್ತು ಕೃಷಿಅರಣ್ಯ ನೀತಿ 2021ರ ಸಂಸ್ಥೆಯ ಶಿಫಾರಸ್ಸನ್ನು ದಿ:18–01–2022ರಂದು ಮಾನ್ಯ ಸಚಿವರ ಖಾಸಗಿ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ನಾಗರಿಕ ಸರಬರಾಜು ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಪನ್ಮೂಲ ನಿರ್ವಹಣೆ, ಅರಣ್ಯ ಭವನ, ಬೆಂಗಳೂರು ಇವರಿಗೆ ಸಲ್ಲಿಸಲಾಯಿತು.

5. ದಿ: 10–01–2022ರಂದು ನಡೆದ ವಿಶೇಷ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಶ್ರೀ ರಮೇಶ್ ದೇವೆಂದ್ರಪ್ಪ ಬಳೂಟಗಿ ಇವರನ್ನು ಕಾರ್ಯಕಾರಿ ಸಮಿತಿಗೆ ಸಹಸದಸ್ಯರನ್ನಾಗಿ ನೇಮಿಸಿಕೊಳ್ಳಲಾಗಿದೆ.

6. ದಿ: 20–01–2022ರಂದು ಕರ್ನಾಟಕ ಅರಣ್ಯ ಇಲಾಖೆ ಆಯೋಜಿಸಿದ್ದ ಮಾನ್ಯ ಸಚಿವರು, ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಶ್ರೀಗಂಧ ನೀತಿ ಮತ್ತು ರೈತರು ಬೆಳೆಯುತ್ತಿರುವ ವಿವಿಧ ಜಾತಿಯ ಮರಗಳ ಕಟಾವು, ಸಾಗಾಣಿಕೆ ಹಾಗೂ ಮಾರಾಟ ಸರಳೀಕರಗೊಳಿಸುವ ಕುರಿತ ಸಭೆಗೆ ದಿ:10–01–2022ರಂದು ವಿಶೇಷ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ದೀಪಕ್ ಶರ್ಮ, ಸದಸ್ಯರಾದ ಎ.ಬಿ. ಪಾಟೀಲ್, ಮಲ್ಲೇಶ್ ಲಿಂಗಾಚಾರ್ ಹಾಗೂ ಖಾಯಂ ಆಹ್ವಾನಿತರಾದ ಶ್ರೀ ಎ.ಎಂ. ಅಣ್ಣಯ್ಯ ಇವರು ವರ್ಚ್ಯುಯಲ್ ಮೀಟ್ ಮೂಲಕ್ ಭಾಗವಹಿಸಿದ್ದರು.

7. ದಿ: 18–01–2022 ರಂದು ಸಂಸ್ಥೆಯ ಚಟುವಟಿಕೆಗಳನ್ನು ವಿಸ್ತರಿಸಲು ಒಂದು ಬಾರಿಗೆ ರೂ. ಎರಡು ಕೋಟಿ ಅನುದಾನವನ್ನು ಕರ್ನಾಟಕ ಬಜೆಟ್ ಅಧಿವೇಶನದಲ್ಲಿ ಒದಗಿಸುವಂತೆ ಕೋರಿ ಗೌರವಾನ್ವಿತ ಸಚಿವರು, ಅರಣ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು, ಕರ್ನಾಟಕ ಸರ್ಕಾರ ಇವರಿಗೆ ಮನವಿಯನ್ನು ಸಲ್ಲಿಸಲಾಯಿತು. ಪ್ರತಿಯನ್ನು ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಮಾನ್ಯ ಅಪರ ಪ್ರಧಾನ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಶ್ರೀ ಸಂಜಯ್ ಮೋಹನ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಆರಣ್ಯ ಪಡೆ ಮುಖ್ಯಸ್ಥರು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅಭಿವೃದ್ಧಿ), ಶ್ರೀ ಪಿ.ಸಿ. ರೇ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂಪನ್ಮೂಲ ನಿರ್ವಹಣೆ) ಇವರಿಗೆ ಸಲ್ಲಿಸಲಾಯಿತು.

8. ದಿ:02–02–2022ರಂದು ಸಂಸ್ಥೆಯ ಚಟುವಟಿಕೆಗಳನ್ನು ವಿಸ್ತರಿಸಲು ಒಂದು ಬಾರಿಗೆ ರೂ. ಎರಡು ಕೋಟಿ ಅನುದಾನವನ್ನು ಕರ್ನಾಟಕ ಬಜೆಟ್ ಅಧಿವೇಶನದಲ್ಲಿ ಒದಗಿಸುವಂತೆ ಕೋರಿ ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರಿಗೆ ಸಲ್ಲಿಸಲಾಯಿತು.

9. ದಿ: 04–02–2022ರಂದು ಟಿ.ಹೆಚ್. ಮಲ್ಲಿಕಾರ್ಜುನ ಟ್ರಸ್ಟ್ ನೀಡಿದ ದೇಣಿಗೆ ರೂ. 2,07,339.26/– ಮೊತ್ತಕ್ಕೆ ರೂ. 2,660.74/– ನ್ನು ಸೇರಿಸಿ ಒಟ್ಟು ರೂ. 2,10,000/– ಅನ್ನು ಕೆನರಾ ಬ್ಯಾಂಕ್, 18ನೇ ಕ್ರಾಸ್, ಮಲ್ಲೇಶ್ವರಂ ಶಾಖೆಯಲ್ಲಿ ಮೂರು ವರ್ಷಗಳ ಅವಧಿಗೆ ನಿಗಧಿತ ಠೇವಣಿ ಇಡಲಾಗಿದೆ.

10. ದಿ: 29–12–2021 ರಿಂದ ದಿ: 28–02–2022ರವರೆಗೆ ಶ್ರೀ ಅಜಯ್ ಮಿಶ್ರರವರು –1, ಶ್ರೀ ಎ. ಅಶ್ವಥಯ್ಯ –1, ಶ್ರೀ ಎ.ಎಂ. ಅಣ್ಣಯ್ಯ –2 ಹಾಗೂ ಡಾ. ಎ.ಬಿ ಪಾಟೀಲ್ –10 (9+1) ಒಟ್ಟು 13 ಅಜೀವ ಸದಸ್ಯತ್ವ, ಒಂದು ಸಹ ಸದಸ್ಯತ್ವ ಹಾಗೂ ಒಂದು ಸಾಮಾನ್ಯ ಸದಸ್ಯತ್ವವನ್ನು ಪಡೆಯಲಾಗಿದೆ.

11. ದಿ:10–03–2022ರಂದು ಸಂಸ್ಥೆಯ ಸದಸ್ಯರಾದ ಶ್ರೀ ಎ.ಎಂ. ಅಣ್ಣಯ್ಯರವರು ವರ್ಲ್ಡ್ ರಿಸೋರ್ಸಸ್ ಇಂಡಿಯಾ, ನವದೆಹಲಿ ಇವರು ಆಯೋಜಿಸಿದ್ದ Roadmap for scaling trees outside forests in India: learnings on Policy incentives from Six Indian states ಆನ್‌ಲೈನ್ ಚರ್ಚೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಕರ್ನಾಟಕದ ಸ್ಥಿತಿಗತಿ, ಕೃಷಿಅರಣ್ಯ ಸಂಸ್ಥೆಯು ಕೃಷಿಅರಣ್ಯ ಹೆಚ್ಚಿಸಲು ನಡೆಸುತ್ತಿರುವ ಪ್ರಯತ್ನದ ಬಗ್ಗೆ ವಿವರಿಸಿದರು. ಸಂಸ್ಥೆಯ ಹಲವು ಸದಸ್ಯರು ಈ ಚರ್ಚೆಯಲ್ಲಿ ಪ್ರೇಕ್ಷಕರಾಗಿ ಭಾಗವಹಿಸಿದ್ದರು.

12. ದಿನಾಂಕ: 14–03–2022ರಂದು ನೂತನ ಕಾರ್ಯಕಾರಿ ಸಮಿತಿಯ ಎರಡನೇ ಸಭೆಯನ್ನು ನಡೆಸಲಾಯಿತು.



ನೂತನ ಆಡಳಿತ ಮಂಡಳಿ

# ಕಾಡು ಮತ್ತು ಕೃಷಿಕಾಡಿನಲ್ಲಿ ಬೆಂಕಿ ನಿರ್ವಹಣೆ

**ಎ.ಎಂ. ಅಣ್ಣಯ್ಯ,** ಭಾ.ಅ.ಸೇ (ನಿ) ಮೊ: 94480 19306

ಗಾಳಿ, ನೀರು, ಮಣ್ಣು, ಸಸ್ಯ ಮತ್ತು ಪ್ರಾಣಿಗಳು ಪರಿಸರದ ಮುಖ್ಯ ಅಂಗಗಳು. ಪರಿಸರದ ಸಮತೋಲನೆಯಲ್ಲಿ ಸಸ್ಯ ವರ್ಗವಾದ ಅರಣ್ಯಗಳು ಪ್ರಮುಖ ಪಾತ್ರವನ್ನು ವಹಿಸಿವೆ. ಈ ಸಮತೋಲನೆಗಾಗಿ ಭಾರತದ ಅರಣ್ಯ ನೀತಿಯಂತೆ ಭೌಗೋಳಿಕ ಒಟ್ಟು ವಿಸ್ತೀರ್ಣದಲ್ಲಿ ಶೇಕಡಾ 33ರಷ್ಟು ಅರಣ್ಯ ಇರಬೇಕು. ಆದರೆ ಭಾರತದಲ್ಲಿ ಕೇವಲ 21.71% ರಷ್ಟು ಅರಣ್ಯ ಪ್ರದೇಶವಿದೆ. ಕರ್ನಾಟಕದಲ್ಲಿ ಶೇಕಡ 22.61% ರಷ್ಟು ಅರಣ್ಯ ಪ್ರದೇಶವಿದೆ.

ಕಾಡುಗಳಿಗೆ ದೊಡ್ಡ ವಿಪತ್ತು ಎಂದರೆ ಕಾಡಿಚ್ಚು. ಕಾಡಿನಷ್ಟೇ ಹಳೆಯದಾದ ಕಾಡಿಚ್ಚು ಅರಣ್ಯ ಸಂಪತ್ತನ್ನು ನಾಶ ಮಾಡುವುದಲ್ಲದೆ ಅಲ್ಲಿಯ ಸಸ್ಯ ಹಾಗೂ ಪ್ರಾಣಿ ಸಮೂಹಗಳಿಗೆ ಹಾನಿ ಮಾಡಿ ಜೀವ ವೈವಿಧ್ಯತೆಯನ್ನು ಕಡಿಮೆ ಮಾಡುತ್ತದೆ. ಅಲ್ಲದೆ ಆ ಪ್ರದೇಶದ ಜೀವಿ ಪರಿಸ್ಥಿತಿ ವ್ಯವಸ್ಥೆಯನ್ನು ಹಾಳು ಮಾಡಿ ಪರಿಸರ ಅಸಮತೋಲನೆಯನ್ನು ಉಂಟು ಮಾಡುತ್ತದೆ. ಒಂದು ಮೂಲದ ಪ್ರಕಾರ ಭಾರತದಲ್ಲಿ ಸುಮಾರು 55% ಅರಣ್ಯಕ್ಕೆ ಪ್ರತಿ ವರ್ಷ ಬೆಂಕಿ ಬೀಳುತ್ತದೆ ಹಾಗೂ ಸುಮಾರು ರೂ.440 ಕೋಟಿ ಪ್ರತಿ ವರ್ಷ ನೇರ ನಷ್ಟವಾಗುತ್ತಿದೆ. ಪರಿಸರಕ್ಕೆ ಆಗುತ್ತಿರುವ ಹಾನಿ ಊಹಿಸಲೂ ನಿಲುಕದ್ದು. ಕರ್ನಾಟಕದಲ್ಲಿ ಸರಾಸರಿ 45% ಅರಣ್ಯ ಪ್ರದೇಶಗಳು ಪ್ರತಿ ವರ್ಷವೂ ಬೆಂಕಿಗಾಹುತಿಯಾಗುತ್ತಿದೆ ಎಂಬುದು ಆತಂಕಕಾರಿ ವಿಷಯ. ಪ್ರಪಂಚದ ಜೀವ ವೈವಿಧ್ಯದ 18 ಅಗ್ರತಾಣಗಳಲ್ಲಿ ಭಾರತದ ಪಶ್ಚಿಮ ಘಟ್ಟಗಳು ಒಂದಾಗಿದ್ದು ಇಲ್ಲಿಯ ನಿತ್ಯಹರಿದ್ವರ್ಣ ಹಾಗೂ ಎಲೆ ಉದುರುವ ಕಾಡುಗಳನ್ನು ಕಾಡಿಚ್ಚಿನಿಂದ ಸಂರಕ್ಷಿಸುವುದು ನಮ್ಮೆಲ್ಲರ ಅಗ್ರ ಕರ್ತವ್ಯವಾಗಿದೆ.

**ಕೃಷಿಕಾಡಿನಲ್ಲಿ ಬೆಂಕಿ ನಿರ್ವಹಣೆ:** ಕಾಡು ಹಾಗೂ ಕೃಷಿಕಾಡಿನಲ್ಲಿ ಗಿಡಗಳನ್ನು ನೆಟ್ಟ ಮೊದಲ ನಾಲ್ಕೈದು ವರ್ಷಗಳು ಬೇಸಿಗೆಯಲ್ಲಿ ಬೆಂಕಿ ಬೀಳದಂತೆ ಬಹಳ ಜಾಗರೂಕತೆಯಿಂದ ಕಾಯಬೇಕು. ನೆಡುತೋಪಿನಲ್ಲಿರುವ ಒಣಗಿದ ಹುಲ್ಲು ಮತ್ತು ಎಲೆಗಳು ಬೇಸಿಗೆಯಲ್ಲಿ ಬೆಂಕಿಗೆ ಆಹ್ವಾನ ನೀಡುತ್ತವೆ. ಆ ಕಾಲದಲ್ಲಿ ಉದ್ದೇಶಪೂರ್ವಕವಾಗಿ ಅಥವಾ ಆಕಸ್ಮಿಕವಾಗಿ ಬೆಂಕಿ ಬಿದ್ದಲ್ಲಿ ಎಳೆಯ ಗಿಡಗಳು ಸಂಪೂರ್ಣವಾಗಿ ನಾಶವಾಗುತ್ತವೆ. ನಾಲ್ಕೈದು ವರ್ಷಗಳ ನಂತರ ಸಾಗುವಾನಿ ಗಿಡಗಳು ಬೇಸಿಗೆಯಲ್ಲಿ ಎಲೆಗಳನ್ನು ಉದುರಿಸುವುದರಿಂದ ನೆಲದ ಮೇಲೆ ಒಣಗಿದ ಎಲೆಗಳ ರಾಶಿಯೇ ಬಿದ್ದಿರುತ್ತದೆ. ಇದು ಬಹಳ ಅಪಾಯಕಾರಿ ಆದ್ದರಿಂದ ಕೃಷಿಕಾಡಿನ ನೆಡುತೋಪುಗಳ ಸುತ್ತ ಹಾಗೂ ನೆಡುತೋಪಿನ ಮಧ್ಯ ಮಧ್ಯ ಬೆಂಕಿ ರೇಖೆಗಳನ್ನು ಡಿಸೆಂಬರ್ ಪ್ರಾರಂಭದಲ್ಲಿ ರಚಿಸಿ ಮೇ ಕೊನೆಯವರೆಗೆ ನೆಡುತೋಪಿಗೆ ಕಟ್ಟುನಿಟ್ಟಾಗಿ ಬೆಂಕಿ ಬೀಳದಂತೆ ನೋಡಿಕೊಳ್ಳಬೇಕು. ಕೃಷಿಅರಣ್ಯ/ಕಾಡುಗಳೂ ಕೂಡ ಅರಣ್ಯಗಳೇ ಆಗಿರುವುದರಿಂದ ಕಾಡಿಗೆ ಬೆಂಕಿ ಬೀಳಲು ಕಾರಣಗಳು, ಅವುಗಳ ರಕ್ಷಣೆ ಹಾಗೂ ಕಾನೂನುಗಳು ಕೃಷಿಅರಣ್ಯಕ್ಕೂ ಅನ್ವಯಿಸುತ್ತವೆ.

**ಕಾಡ್ಗಿಚ್ಚಿಗೆ ಕಾರಣಗಳು:** ಪರಿಸರಾತ್ಮಕ ಇಲ್ಲವೇ ಮಾನವ ನಿರ್ಮಿತವಾದ ಕಾರಣಗಳಿಂದ ಕಾಡಿಗೆ ಬೆಂಕಿ ಬೀಳುತ್ತದೆ.

**ಅ) ಪರಿಸರಾತ್ಮಕ ಕಾರಣಗಳು:** ಕಾಡ್ಗಿಚ್ಚಿನ ಮುಖ್ಯ ನೈಸರ್ಗಿಕವಾದ ಕಾರಣವೆಂದರೆ, ಮಿಂಚು ಹೊಡೆಯುವುದು, ಒಣಗಿನಿಂತ ಮರಗಿಡಗಳು, ಮಿಂಚಿನ ಸಂಪರ್ಕಕ್ಕೆ ಬಂದಾಗ ಅವಕ್ಕೆ ಸುಲಭವಾಗಿ ಬೆಂಕಿ ಹೊತ್ತಿಕೊಳ್ಳುತ್ತದೆ. ಗುಡುಗು, ಸಿಡಿಲು, ಮಿಂಚುಗಳ ಹಿಂದೆ ಸಾಮಾನ್ಯವಾಗಿ ಮಳೆಯು ಬರುವುದರಿಂದ ಕಾಡಿಗೆ ಹೆಚ್ಚಿನ ಅನಾಹುತ ಆಗುವುದು ಕಡಿಮೆ ಎನ್ನಬಹುದು. ಮಿಂಚಿನಿಂದಾಗಿ ಕರ್ನಾಟಕದ ಅರಣ್ಯಗಳಲ್ಲಿ ಕಾಡ್ಗಿಚ್ಚಾಗಿರುವುದನ್ನು ಇದುವರೆಗೆ ಕೇಳಿರುವುದಿಲ್ಲ.

ಕಾಡ್ಗಿಚ್ಚಿಗೆ ಅನುಕೂಲಕರವಾಗಿರುವ ಇತರ ಪರಿಸರಾತ್ಮಕ ಕಾರಣಗಳೆಂದರೆ, (1) ವಾತಾವರಣದ ಉಷ್ಣತೆ ಹೆಚ್ಚಳ, (2) ಬೆಂಕಿಯ ದಿಕ್ಕಿನಲ್ಲಿ ಗಾಳಿಯು ಅತಿ ವೇಗವಾಗಿ ಬೀಸುವುದು, (3) ಮಣ್ಣಿನಲ್ಲಿ ಹಾಗೂ ವಾತಾವರಣದಲ್ಲಿ ತೇವಾಂಶ ಕಡಿಮೆ ಇರುವುದು (4) ಕಾಡಿನ ನೆಲ ಅಂತಸ್ತಿನಲ್ಲಿ ಶೇಖರಗೊಳ್ಳುವ ಒಣಗಿದ ಎಲೆ, ಹುಲ್ಲು, ಕಸಕಡ್ಡಿಗಳ ರಾಶಿ, (5) ಎಲೆ ಉದುರುವ ಕಾಡುಗಳಲ್ಲಿರುವ ಒಣಗಿದ ಬಿದಿರು ಮೆಳೆಗಳು (6) ಕಾಡುಗಳಲ್ಲಿ ಒಣಗಿನಿಂತ ಹಾಗೂ ಬಿದ್ದ ಮರಗಿಡಗಳು ಕಾಡ್ಗಿಚ್ಚಿಗೆ ಪೂರಕ ವಾತಾವರಣ ಕಲ್ಪಿಸುತ್ತವೆ.

**(ಆ) ಮಾನವ ಕಾರಣಗಳು:** ಶೇಕಡ 90ರಷ್ಟು ಕಾಡಿಚ್ಚುಗಳು ಮಾನವ ನಿರ್ಮಿತವಾದುವು.

(1) ದನ ಮತ್ತು ಇತರ ಜಾನುವಾರುಗಳನ್ನು ಕಾಡಿನಲ್ಲಿ ಮೇಯಿಸುವವರು ಹೊಸ ಹುಲ್ಲು ಬರಲಿ ಎಂದು ಉದ್ದೇಶಪೂರ್ವಕವಾಗಿ ಬೆಂಕಿ ಹಾಕುವುದು. (2) ಕಿರುಅರಣ್ಯ ಉತ್ಪನ್ನಗಳಾದ ಬೀಡಿ ಎಲೆ, ಹಿಪ್ಪೆ ಹೂವು, ಜೇನು, ವನ್ಯ ಪ್ರಾಣಿಗಳ ಉತ್ಪನ್ನ ಶೇಖರಿಸಲು ಬೆಂಕಿ ಹಾಕುವುದು (3) ಕುಮರಿ ಅಥವಾ ಕದಲು ಬೇಸಾಯ ಮಾಡಲು ಫಲವತ್ತಾದ ಕಾಡುಗಳಿಗೆ ಬೆಂಕಿ ಹಾಕುವ ಪದ್ಧತಿ ಹಿಂದೆ ಇದ್ದು ಈಗ ಕರ್ನಾಟಕದಲ್ಲಿ ಇರುವುದಿಲ್ಲ (4) ಅರಣ್ಯ ಒತ್ತುವರಿ ಮಾಡಲು ಬೆಂಕಿ ಹಾಕುವುದು (5) ವನ್ಯ ಪ್ರಾಣಿಗಳನ್ನು ಬೇಟೆ ಮಾಡಲು ಕಾಡಿಗೆ ಬೆಂಕಿ ಹಚ್ಚಿ ಪ್ರಾಣಿಗಳನ್ನು ನಿಗದಿತ ದಿಕ್ಕಿಗೆ ಓಡಿಸುವುದು (6) ವನ್ಯ ಪ್ರಾಣಿಗಳಿಂದ ಆಸ್ತಿ–ಪಾಸ್ತಿ, ಮನೆ–ಮಠ, ಬೆಳೆ, ಜಾನುವಾರುಗಳನ್ನು ರಕ್ಷಿಸಲು ಕಾಡಿಗೆ ಬೆಂಕಿ ಹಚ್ಚುವುದು (7) ಅರಣ್ಯಗಳಿಗೆ ಕಿಡಿಗೇಡಿಗಳು ಮೋಜಿಗಾಗಿ ಬೆಂಕಿ ಹಚ್ಚುವ ಪರಿಪಾಠವು ಇದೆ (8) ಕಾಡುಗಳ ಮಧ್ಯ ಮತ್ತು ಅಂಚಿನಲ್ಲಿ ಪ್ರಯಾಣಿಸುವ ಪ್ರವಾಸಿಗಳು, ಯಾತ್ರಿಗಳು ಅಡುಗೆ ಮಾಡಲು, ಚಳಿ ಕಾಯಿಸಲು ಬೆಂಕಿ ಹಚ್ಚಿ ಹಾಗೆಯೇ ಬಿಟ್ಟು ಹೋಗುವುದು (9) ಕಾಡಿನಲ್ಲಿ ಅಥವಾ ಕಾಡಿನ ರಸ್ತೆಯಲ್ಲಿ ಹೋಗುವಾಗ ಬೀಡಿ, ಸಿಗರೇಟು, ಇತ್ಯಾದಿಗಳನ್ನು ಸೇದಿ ಬೇಜವಾಬ್ದಾರಿತನದಿಂದ ಅಥವಾ ಕುಡಿದ ಮತ್ತಿನಿಂದ ಕಾಡಿನಲ್ಲಿ ಬಿಸಾಡುವುದು (10) ಅರಣ್ಯಾಧಿಕಾರಿಗಳು ಕೇಸು ದಾಖಲಿಸಿದಾಗ ಅಥವಾ ಇತರೆ ವೈಯಕ್ತಿಕ ಕಾರಣಗಳಿಂದಾಗಿ ಸೇಡು ತೀರಿಸಿಕೊಳ್ಳಲು ಆಗದವರು ಉದ್ದೇಶ ಪೂರ್ವಕವಾಗಿ ಬೆಂಕಿ ಹಚ್ಚುವುದು (11) ವನ್ಯ ಪ್ರಾಣಿಗಳು ಮತ್ತು ಅವುಗಳ ವಸ್ತುಗಳನ್ನು ಹಾಗೂ ಬೆಲೆ ಬಾಳುವ ಶ್ರೀಗಂಧ, ತೇಗ, ಬೀಟೆ ಮರಮುಟ್ಟುಗಳ ಕಳಸಾಗಾಣಿಕೆ ಮಾಡುವವರು ಅರಣ್ಯಕ್ಕೆ ಬೆಂಕಿ ಹಚ್ಚಿ ಅರಣ್ಯಾಧಿಕಾರಿಗಳ ದಿಕ್ಕು ತಪ್ಪಿಸುವುದು.

## ಕಾಡ್ಗಿಚ್ಚಿನ ಪರಿಣಾಮಗಳು

1)ಕಾಡ್ಗಿಚ್ಚುಗಳು ಕಾಡುಗಳ ನಾಶಕ್ಕೆ ಕಾರಣವಾಗುತ್ತವೆ. ಅನಿಯಂತ್ರಿತ ಕಾಡ್ಗಿಚ್ಚುಗಳು ವನ್ಯ ಜೀವಿಗಳನ್ನು ತೀವ್ರವಾಗಿ ನಾಶಗೊಳಿಸಬಲ್ಲವು. 2) ಕಾಡ್ಗಿಚ್ಚಿನಿಂದ ಸಸ್ಯ ವರ್ಗ ನಾಶವಾಗುವುದರಿಂದ ಮಣ್ಣಿನ ಸವಕಳಿಯಾಗಿ ನದಿಗಳ ಪಾತ್ರ ಬದಲಾಗುತ್ತದೆ. ಅಲ್ಲದೆ ಜಲ ಕಣ್ಣುಗಳಿಲ್ಲದೆ ಹಳ್ಳಗಳು, ನದಿಗಳು ಬತ್ತಿ ಹೋಗುತ್ತವೆ. ಅಂತರ್ಗತ ಜಲ ಮಟ್ಟ ಕುಸಿಯುತ್ತದೆ. ಬರ ಬಂದು ಜನ ಜಾನುವಾರುಗಳ ಜೀವನ ಕಷ್ಟವಾಗುತ್ತದೆ. 3) ಅರಣ್ಯ ನಾಶದಿಂದ ಮಣ್ಣಿನ ಸವಕಳಿಯೂ ಜಾಸ್ತಿಯಾಗುತ್ತದೆ. ಜಲಾನಯನ ಪ್ರದೇಶಗಳಲ್ಲಿ ಸವಕಳಿಯಾದ ಮಣ್ಣು ನದಿಗಳ ಮೂಲಕ ಜಲಾಶಯ ಸೇರಿ ಜಲಾಶಯದಲ್ಲಿ ಶೇಖರಿಸುವ ನೀರಿನ ಪ್ರಮಾಣವನ್ನು ಕುಗ್ಗಿಸುತ್ತದೆ. ಇದರಿಂದ ಕೃಷಿ ಉತ್ಪನ್ನ ಕಡಿಮೆಯಾಗುತ್ತದೆ. 4) ಕಾಡ್ಗಿಚ್ಚಿನಿಂದ ಬೇರೆ ಬೇರೆ ವಯಸ್ಸಿನ ಗಿಡ ಮರಗಳು ನಾಶವಾಗಿ ಎಲ್ಲಾ ವಯಸ್ಸಿನ ಮರಗಳಿಲ್ಲದೆ ಸಮ ವಯಸ್ಸಿನ ಮರಗಳೇ ಇರುತ್ತವೆ. ಇದು ಪರಿಪೂರ್ಣ ಅರಣ್ಯವಾಗುವುದಿಲ್ಲ. 5) ಕಾಡ್ಗಿಚ್ಚಿನಿಂದ ಹಸಿರು ನಾಶವಾಗುವುದರಿಂದ ದ್ಯುತಿಸಂಶ್ಲೇಷಣ ಕ್ರಿಯೆ ಕ್ಷೀಣಿಸಿ ಆಹಾರ ಉತ್ಪನ್ನ ಕಡಿಮೆಯಾಗುತ್ತದೆ. 6) ಸಸ್ಯಗಳಲ್ಲಿ ಪರಾಗಸ್ಪರ್ಶ ಹಾಗೂ ಬೀಜ ಪ್ರಸಾರ ಮಾಡುವ ಸಣ್ಣ ಪ್ರಾಣಿ ಪಕ್ಷಿ ಹಾಗೂ ಕೀಟಗಳು ಬೆಂಕಿಯಿಂದ ನಾಶವಾಗಿ ಅರಣ್ಯಗಳು ಸರಿಯಾಗಿ ಪುನರ್ಭವಗೊಳ್ಳುವುದಿಲ್ಲ. 7) ಕಾಡ್ಗಿಚ್ಚಿನಿಂದ ವೈವಿಧ್ಯಮಯ ಸಸ್ಯವರ್ಗಗಳು ನಾಶವಾಗಿ ಅಗತ್ಯವಿಲ್ಲದ ಲಂಟಾನ, ಪಾರ್ಥೇನಿಯಂ, ಯುಪಟೋರಿಯಂ ಇತ್ಯಾದಿ ಕಳೆಗಳು ಆವರಿಸಿಕೊಂಡು ಸ್ವಾಭಾವಿಕ ಪುನರ್ಭವಕ್ಕೆ ಹಾಗೂ ವನ್ಯ ಜೀವಿಗಳಿಗೆ ಕಂಟಕವಾಗುತ್ತದೆ. 8) ಕಾಡ್ಗಿಚ್ಚಿನಿಂದ ಕೀಟಗಳು, ಉಭಯವಾಸಿಗಳ ಹಾಗೂ ಉರಗಗಳು ಹಾಗೂ ಅವುಗಳ ಆವಾಸಸ್ಥಾನ ನಾಶವಾಗಿ ಪರಾಗಸ್ಪರ್ಶ, ಬೀಜಪ್ರಸಾರ, ಸಂತಾನ ಅಭಿವೃದ್ಧಿಯ ಕ್ಷಯವಾಗುತ್ತದೆ. ಅಲ್ಲದೆ, ಆಹಾರ ಸರಪಳಿಯಲ್ಲಿ ಏರುಪೇರಾಗುತ್ತದೆ. 9) ಕಾಡ್ಗಿಚ್ಚಿನಿಂದ ಪಕ್ಷಿಗಳ ಆವಾಸಸ್ಥಾನ ಕ್ಷೀಣಿಸಿ, ಆಹಾರ ಕೊರತೆಯಾಗಿ ವಲಸೆ ಹೋಗುವುದು, ಬೀಜ ಪ್ರಸಾರದಲ್ಲಿ ವ್ಯತ್ಯಯ ಹಾಗೂ ಗೂಡು ಕಟ್ಟಿ ಸಂತಾನ ಮುಂದುವರೆಸುವಲ್ಲಿ ವ್ಯತ್ಯಯ

ಇತ್ಯಾದಿ ದುಷ್ಪರಿಣಾಮಗಳು ಉಂಟಾಗುತ್ತವೆ. 10) ಕಾಡ್ಗಿಚ್ಚಿನಿಂದ ಆನೆಗಳ ಮತ್ತು ಇತರ ಸಸ್ತನಿಗಳ ಆವಾಸಸ್ಥಾನ ಕ್ಷೀಣಿಸುತ್ತದೆ ಹಾಗೂ ಆಹಾರ, ನೀರಿನ ಕೊರತೆಯಾಗುತ್ತದೆ. ಅವುಗಳ ಸಂಚಾರ ಮುಕ್ತ ಮಾರ್ಗ ಛಿದ್ರಛಿದ್ರವಾಗಿ ವಲಸೆ ಹೋಗುವುದು, ಕೃಷಿ ಭೂಮಿಗಳ ಮೇಲೆ ದಾಳಿ, ಇತ್ಯಾದಿ ಮಾನವ–ವನ್ಯಪ್ರಾಣಿ ಸಂಘರ್ಷಗಳು ಉಂಟಾಗುತ್ತವೆ. 11) ಖನಿಜಗಳಿಂದ ಬೃಹತ್ ಪ್ರಮಾಣದಲ್ಲಿ ಸಾರಜನಕ ಹಾಗೂ ಗಂಧಕಗಳು ವಾತಾವರಣಕ್ಕೆ ಬಿಡುಗಡೆಯಾಗುತ್ತವೆ. 12) .ಕಾಡ್ಗಿಚ್ಚಿನಿಂದ ವಾತಾವರಣದಲ್ಲಿ ಇಂಗಾಲದ ಮೂಲಗಳು ಹೆಚ್ಚಾಗಿ ಇಂಗಾಲದ ಸಿಂಕ್‌ಗಳಾದ ಅರಣ್ಯಗಳು ಕಡಿಮೆಯಾಗಿ ವಾಯುಮಾಲಿನ್ಯ ಹೆಚ್ಚಾಗುತ್ತದೆ. ಇಂಗಾಲ ಪ್ರತ್ಯೇಕೀಕರಣವಾಗದ ವಾತಾವರಣದಲ್ಲಿ ಹಸಿರು ಮನೆ ಅನಿಲಗಳಾದ ಇಂಗಾಲದ ಡೈ ಆಕ್ಸೈಡ್, ನೈಟ್ರಸ್ ಆಕ್ಸೈಡ್, ಓಜೋನ್, ಮಿಥೇನ್ ಇತ್ಯಾದಿ ಅನಿಲಗಳು ಹೆಚ್ಚಾಗಿ ಭೂಮಿಯ ತಾಪವನ್ನು ಹೆಚ್ಚಿಸಿ ಜಾಗತಿಕ ತಾಪ ಏರಿಕೆಯಾಗುತ್ತದೆ. ಇದರಿಂದ ವಾಯುಗುಣ ಬದಲಾವಣೆ, ಕೃಷಿಯಲ್ಲಿ ಸಮಸ್ಯೆಗಳು ಇತ್ಯಾದಿ ಭಯಂಕರ ಪರಿಣಾಮಗಳಾಗುತ್ತವೆ.

**ಕಾಡಿಚ್ಚು ನಿರ್ವಹಣೆ:** ದೇಶದಲ್ಲಿ ಕಾಡ್ಗಿಚ್ಚಿನ ಪ್ರಕರಣಗಳು ಪ್ರತಿ ವರ್ಷ ಹೆಚ್ಚುತ್ತಲೇ ಇವೆ ಹಾಗೂ ಹೆಚ್ಚಿನ ಅರಣ್ಯ ಪ್ರದೇಶಗಳು ಅಗ್ನಿಗೆ ಆಹುತಿಯಾಗುತ್ತಿವೆ. ಅರಣ್ಯ ಬೆಂಕಿ ನಿರ್ವಹಣೆಯ ಮುಖ್ಯ ಅಂಶಗಳಾದ ಬೆಂಕಿ ನಿಯಂತ್ರಣ ಕೇಂದ್ರಗಳ ಸ್ಥಾಪನೆ, ವಿವಿಧ ಇಲಾಖೆಗಳ ಹೊಂದಾಣಿಕೆ, ಸಾಕಷ್ಟು ಹಣಕಾಸು ಲಭ್ಯತೆ, ಮಾನವ ಸಂಪನ್ಮೂಲಗಳ ಅಭಿವೃದ್ಧಿ, ಬೆಂಕಿ ನಿರ್ವಹಣೆ ಹಾಗೂ ಸಂಶೋದನೆ ಇವುಗಳು ಪರಿಪೂರ್ಣವಾಗಿ ಹಾಗೂ ಪರಿಣಾಮಕಾರಿಯಾಗಿ ಆಗಬೇಕಾಗಿದೆ.

**ನಿಯಂತ್ರಿತವಾಗಿ ಸುಡುವುದು:** ಇದೊಂದು ಪರಿಸರ ನಿರ್ವಹಣೆಯ ವಿಧಾನ. ಅರಣ್ಯಗಳ ನೆಲದ ಮೇಲೆ ಬಿದ್ದ ಜೈವಿಕ ಕಸವನ್ನು ಅಪಾಯಕಾರಿ ಪ್ರಮಾಣದಲ್ಲಿ ಶೇಖರವಾಗಲು ಬಿಡದೆ ಉರಿಸಿಬಿಡುವುದು. ಬೆಂಕಿ ಕಾಡಿನ ಮಿತ್ರ ಹಾಗೂ ಶತ್ರು ಎರಡೂ ಹೌದು. "ಕಾಡಿಗೆ ನಿಯಂತ್ರಿತ ಮೇಲ್ಮೈ ಬೆಂಕಿ ಮಿತ್ರ ಹಾಗೂ ಕಾಡ್ಗಿಚ್ಚು ಅದರ ಶತ್ರು". ಮರಗಿಡಗಳು ಹತ್ತಿ ಉರಿದಾಗ ಉತ್ಪತ್ತಿಯಾಗುವ ಬೂದಿಯಲ್ಲಿ ಪೊಟಾಷಿಯಂ, ರಂಜಕ, ಕ್ಯಾಲ್ಸಿಯಂ ಮತ್ತು ಇತರ ಖನಿಜಗಳು ಪೋಷಕಾಂಶಗಳ ರೂಪದಲ್ಲಿ ಮಣ್ಣಿಗೆ ಸೇರಿ ಮಣ್ಣಿನ ಫಲತ್ತತೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುತ್ತವೆ. ಹೀಗೆ ಬೆಂಕಿ ಖನಿಜ ಚಕ್ರಗಳಿಗೆ ಸಹಾಯ ಮಾಡುತ್ತದೆ. ಅಲ್ಲದೆ ಅರಣ್ಯ ಸಸ್ಯಗಳು ಹಾಗೂ ವೃಕ್ಷಗಳಿಗೆ ಪೋಷಕಾಂಶಗಳು ದೊರೆತು ಅವುಗಳು ಸೊಂಪಾಗಿ ವೇಗವಾಗಿ ಬೆಳೆಯುತ್ತವೆ. ಬೆಂಕಿಯಿಂದ ಸಸ್ಯಗಳು ಸುಟ್ಟು ಅವುಗಳಿಲ್ಲದೆ ಇರುವುದರಿಂದ ಸೂರ್ಯನ ಕಿರಣಗಳು ನೇರವಾಗಿ ಮಣ್ಣಿಗೆ ಬಿದ್ದು ಬೀಜಾಂಕುರ ಪಚೋದಿಸುತ್ತವೆ. ಬೆಂಕಿಯ ನಂತರ ಅತ್ಯಂತ ಸೊಂಪಾಗಿ ಬೆಳೆಯುವ ಹುಲ್ಲು ವನ್ಯ ಪ್ರಾಣಿಗಳ ಆಹಾರ ಸರಪಳಿಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ.

ಅತ್ಯಂತ ನಿಯಂತ್ರಿತ ಸ್ಥಿತಿಗತಿಗಳಲ್ಲಿ ಬೆಂಕಿಯನ್ನು ಹೊತ್ತಿಸಿ ಹೆಚ್ಚಿನ ಜಾಗರೂಕತೆಯಿಂದ ಬೆಂಕಿಯನ್ನು ನಿಗಾವಣೆ ಮಾಡಿದಾಗ ಜೈವಿಕ ಪದಾರ್ಥಗಳು ಸುಡುವುದಲ್ಲದೆ, ಮರಗಳ ಸಣ್ಣ ಸಸಿಗಳು ಬೆಳೆಯಲು ಸಹಾಯವಾಗುತ್ತದೆ. ಆಗಾಗ್ಗೆ ಉಂಟಾಗುವ ನಿಯಂತ್ರಿತ ಬೆಂಕಿಯಿಂದ ವಿವಿಧ ವಯೋವರ್ಗದ ಸಸ್ಯ ಸಿರಿಯೊಡೆದು ಶ್ರೀಮಂತ ಸಸ್ಯ ವೈವಿಧ್ಯ ಹಾಗೂ ಪ್ರಾಣಿ ವೈವಿಧ್ಯಕ್ಕೆ ಕಾರಣವಾಗುತ್ತದೆ. ನಿಯಂತ್ರಿತ ಅರಣ್ಯ ಬೆಂಕಿಯಿಂದ ಬೀಜಗಳ ಮೇಲ್ಭಾಗ ಸ್ವಲ್ಪ ಮಟ್ಟಿಗೆ ಸುಟ್ಟು ಬೀಜೋಪಚಾರವಾಗಿ ಮೊಳಕೆಯಾಗುವ ಸಾಮರ್ಥ್ಯ ಹೆಚ್ಚಾಗುತ್ತದೆ. ಬೆಂಕಿಯಿಂದ ಕಳೆಗಳನ್ನು ನಿಯಂತ್ರಿಸಬಹುದು.

ಆದರೆ ಕಾಡ್ಗಿಚ್ಚಿನಿಂದ ಅಪಾರ ಜೀವ ವೈವಿಧ್ಯ ನಾಶವಾಗುತ್ತದೆ. ಅಲ್ಲದೆ ಖನಿಜಗಳಿಂದ ಬೃಹತ್ ಪ್ರಮಾಣದಲ್ಲಿ ಸಾರಜನಕ ಹಾಗೂ ಗಂಧಕಗಳು ಬಿಡುಗಡೆಯಾಗಿ ವಾತಾವರಣದಲ್ಲಿ ಇಂಗಾಲದ ಮೂಲಗಳು ಹೆಚ್ಚಾಗಿ ವಾಯು ಮಾಲಿನ್ಯವಾಗುತ್ತದೆ. ಹಸಿರುಮನೆ ಪರಿಣಾಮದಿಂದ ಜಾಗತಿಕ ತಾಪಮಾನ ಹೆಚ್ಚಾಗಿ ಜೀವಿಗಳ ಬದುಕು ಅಲ್ಲೋಲ ಕಲ್ಲೋಲವಾಗುತ್ತದೆ.

ಕಾಡಿನ ಬೆಂಕಿ ಹಾಗೂ ಕಾಡ್ಗಿಚ್ಚು ನಿರ್ವಹಣೆಯಲ್ಲಿ ಮೂರು ಹಂತಗಳನ್ನು ಗುರುತಿಸಬಹುದು.

1. ಕಾಡಿನಲ್ಲಿ ಬೆಂಕಿ ಬೀಳದ ಹಾಗೆ ಮುನ್ನೆಚ್ಚರಿಕೆ ವಹಿಸುವುದು. 2. ಬೆಂಕಿಯನ್ನು ಪತ್ತೆ ಹಚ್ಚುವುದು ಹಾಗೂ ಅದು ಹರಡದಂತೆ ಕ್ಷಿಪ್ರ ಕ್ರಮ ತೆಗೆದುಕೊಳ್ಳುವುದು, 3, ಬೆಂಕಿಯೊಡನೆ ಹೋರಾಟ ಮಾಡುವುದು ಮತ್ತು ನಂದಿಸುವುದು.

**1. ಕಾಡಿನಲ್ಲಿ ಬೆಂಕಿ ಬೀಳದ ಹಾಗೆ ಮುನ್ನೆಚ್ಚರಿಕೆ**

ಕರ್ನಾಟಕದ ಕಾಡುಗಳಲ್ಲಿ ಬೆಂಕಿ ಬೀಳುವ ಕಾಲ ಫೆಬ್ರವರಿ ಮಧ್ಯದಿಂದ ಮೇ ತಿಂಗಳ ಮಧ್ಯಭಾಗದವರೆಗೆ ಇರುತ್ತದೆ. ಇದು ಬೇಸಿಗೆಯ ಕಾಲವಿದ್ದು ವಾತಾವರಣದಲ್ಲಿ ಹೆಚ್ಚಿನ ಉಷ್ಣತೆ ಹಾಗೂ ಕಡಿಮೆ ತೇವಾಂಶವಿರುತ್ತದೆ. ಕುರುಚಲು, ಉದುರೆಲೆ ಕಾಡುಗಳು ಹಾಗೂ ಶೋಲಾ ಸುತ್ತಲಿರುವ ಹುಲ್ಲುಗಾವಲುಗಳು ಒಣಗಿರುತ್ತವೆ. ಈ ಕಾಡುಗಳಲ್ಲಿ ನೆಲದ ಮೇಲೆ ಅಪಾರ ಒಣಗಿದ ಜೈವಿಕ ರಾಶಿ ಬಿದ್ದಿರುತ್ತದೆ. ಈ ರಾಶಿಗೆ ಯಾವುದಾದರೂ ಒಂದು ಬೆಂಕಿ ಹೊತ್ತಿಕೊಳ್ಳುವ ಪ್ರಥಮ ಶಕ್ತಿ ಸಿಕ್ಕಾಗ ಅದು ಗಾಳಿಯಲ್ಲಿರುವ ಆಮ್ಲಜನಕವನ್ನು ಉಪಯೋಗಿಸಿಕೊಂಡು ಒಂದು ರಾಸಾಯನಿಕ ಕ್ರಿಯೆ ನಡೆದು ಸಣ್ಣ ಕಾಡಿನ ಬೆಂಕಿಯಾಗಿ ಬೇಗ ನಂದಿಸದಿದ್ದಲ್ಲಿ ಕಾಡ್ಗಿಚ್ಚಾಗಿ ಪರಿಣಮಿಸುತ್ತದೆ.

**ಅ. ಬೆಂಕಿಗೆರೆ ಅಥವಾ ಬೆಂಕಿ ಪಟ್ಟಿ ರಚನೆ**

ರೋಗ ಉಪಚಾರದೊಂದಿಗೆ ಅದು ಬಾರದಂತೆ ತಡೆಯುವುದು ಬಹು ಮುಖ್ಯ. ಇದು ಕಾಡಿನ ಬೆಂಕಿ ವಿಚಾರದಲ್ಲಿ ನೂರಕ್ಕೆ ನೂರರಷ್ಟು ಸತ್ಯ. ಬೇಸಿಗೆಯಲ್ಲಿ ಅರಣ್ಯ ಪ್ರದೇಶಗಳಿಗೆ ಕಾಡ್ಗಿಚ್ಚು ಹರಡುವುದನ್ನು ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮವಾಗಿ ಕಾಡಿನ ಅಂಚಿನಲ್ಲಿ, ಕಾಡಿನ ಒಳಗಿನ ರಸ್ತೆ ಬದಿಗಳಲ್ಲಿ, ಕಾಡಿನಲ್ಲಿರುವ ಜನವಸತಿ ಸುತ್ತ ಹಾಗೂ ಕಾಡಿನ ಮಧ್ಯದಲ್ಲಿ, ಅರಣ್ಯದ ಬ್ಲಾಕ್ ಮತ್ತು ಕಂಪಾರ್ಟ್‌ಮೆಂಟ್ ಎಲ್ಲೆಗಳಲ್ಲಿ 10 ಮೀಟರ್ ಅಡ್ಡಳತೆಯ ಪಟ್ಟಿಗಳಲ್ಲಿ ಒಣಗಿದ ಎಲೆ, ಗಿಡ–ಗಂಟೆಗಳನ್ನು ಕಟ್ಟುನಿಟ್ಟಿನ ಮೇಲ್ವಿಚಾರಣೆಯಲ್ಲಿ ಸುಡಲಾಗುತ್ತದೆ.

ಬೆಂಕಿ ಪ್ರಕರಣಗಳಲ್ಲಿ ಬೆಂಕಿಯನ್ನು ವಾತಾವರಣದಲ್ಲಿ ಕಡಿಮೆ ತಾಪ ಹಾಗೂ ಹೆಚ್ಚು ತೇವಾಂಶವಿರುವ ಹಾಗೂ ಗಾಳಿಯು ಕಡಿಮೆ ವೇಗ ಇರುವ ಬೆಳಗ್ಗೆ ಮತ್ತು ಸಂಜೆ ಸಮಯದಲ್ಲಿ ಸುಡಬೇಕು. ಸುಡುವಾಗ ಕಟ್ಟುನಿಟ್ಟಿನ ಮೇಲ್ವಿಚಾರಣೆಯನ್ನು ಸಾಕಷ್ಟು ಅರಣ್ಯ ಬೆಂಕಿ ಕಾವಲುಗಾರರನ್ನು ಅರಣ್ಯ ಇಲಾಖೆಯು ಪ್ರಾಮಾಣಿಕವಾಗಿ ನೇಮಕ ಮಾಡಿಕೊಂಡು ಕರ್ತವ್ಯ ನಿರ್ವಹಿಸಬೇಕು. ಈ ರೀತಿ ಬೆಂಕಿ ಲೈನ್‌ಗಳನ್ನು ಮಾಡುವುದರಿಂದ ಉದ್ದೇಶಿತ ಅಥವಾ ಆಕಸ್ಮಿಕವಾಗಿ ಬೀಳುವ ಬೆಂಕಿ ಕಾಡಿಗೆ ಬೀಳದಂತೆ ಹಾಗೂ ಹರಡದಂತೆ ತಡೆಯಬಹುದು. ಕಾಡಿನ ಒಂದು ಬ್ಲಾಕಿನಿಂದ ಮತ್ತೊಂದು ಬ್ಲಾಕಿಗೆ ಹರಡದಂತೆ ತಡೆಯಬಹುದು.

**(ಆ) ಕಾಡಿನ ಬೆಂಕಿಯ ಬಗ್ಗೆ ಜನಜಾಗೃತಿ**

ಕಾಡಿನ ಅಂಚಿನಲ್ಲಿರುವ ಹಾಗೂ ಹಳ್ಳಿಯ ಜನರನ್ನು ವಿಶೇಷವಾಗಿ ಮಹಿಳೆಯರನ್ನು ಹಾಗೂ ಕಾಡಿನ ಒಳಗೆ ಹಾಡಿಯಂತ ಪ್ರದೇಶಗಳಲ್ಲಿರುವ ಜೇನು ಕುರುಬರು, ಬೆಟ್ಟ ಕುರುಬರು,



ಸೋಲಿಗರು, ಸಿದ್ದಿಗಳು, ಇತ್ಯಾದಿ ಬುಡಕಟ್ಟು ಜನರನ್ನು ಅರಣ್ಯಾಧಿಕಾರಿಗಳು ಸ್ನೇಹಸೇತು ಸಂಪರ್ಕ ಮಾಡಿ ಅವರ ಮನ ಒಲಿಸಿ ಕಾಡಿಗೆ ಬೆಂಕಿ ಬೀಳದ ಹಾಗೆ ಸಂಯುಕ್ತ ಸಂಯೋಜನೆ ರೂಪಿಸಿಕೊಳ್ಳಬೇಕು. ಸ್ಥಳೀಯ ಎನ್.ಜಿ.ಓ.ಗಳನ್ನು ಸರಿಯಾಗಿ ಬಳಸಿಕೊಳ್ಳದಿದ್ದಲ್ಲಿ ಬೆಂಕಿ ದುರಂತ ಖಚಿತ. ಕಾಡಿನ ಅಂಚಿನ ಗ್ರಾಮಗಳಲ್ಲಿ ಕರಪತ್ರ ಹಂಚಿಕೆ ಭಿತ್ತಿ ಪತ್ರ ಹಾಕುವ ಮೂಲಕ, ಬೀದಿ ನಾಟಕಗಳ ಹಾಗೂ ಕಿರುಚಿತ್ರಗಳನ್ನು ಪ್ರದರ್ಶನ ಮಾಡುವ ಮೂಲಕ ಕಾಡ್ಗಿಚ್ಚಿನ ಕರಾಳ ಮುಖವಾಡವನ್ನು, ವಿರಾಟಸ್ವರೂಪದ ಬಗ್ಗೆ ಅರಿವು ಮೂಡಿಸಬೇಕು. ಅರಣ್ಯಗಳ ಸುತ್ತಮುತ್ತಲಿನ ಶಾಲಾ ಕಾಲೇಜುಗಳ ಉಪಾಧ್ಯಾಯರು, ಉಪನ್ಯಾಸಕರುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಸ್ತ್ರೀ ಶಕ್ತಿ ಸಂಘಗಳಿಗೆ ಜನಪ್ರತಿನಿಧಿಗಳಿಗೆ ಗ್ರಾಮದ ವಿವಿಧ ಸಂಘಸಂಸ್ಥೆಗಳಿಗೆ ಮಾಹಿತಿ ನೀಡಬೇಕು. ಆಕಾಶವಾಣಿ ಹಾಗೂ ದೂರದರ್ಶನದ ಮೂಲಕ ತಜ್ಞರಿಂದ ಕಾಡಿನ ಬೆಂಕಿಯ ಬಗ್ಗೆ ಚರ್ಚೆ, ಮಾತುಕತೆಗಳನ್ನು ನಡೆಸಿ ಬಿತ್ತರಿಸಬೇಕು.

**2. ಬೆಂಕಿ ಪತ್ತೆ ಹಚ್ಚುವಿಕೆ**

ಕಾಡಿನಲ್ಲಿ ಎತ್ತರ ಪ್ರದೇಶಗಳಲ್ಲಿ, ಆಯಕಟ್ಟಿನ ಜಾಗಗಳಲ್ಲಿ ಬೆಂಕಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸಬೇಕು. ಅಲ್ಲಿ ದಿನವಿಡಿ ಬೆಂಕಿ ಕಾವಲುಗಾರರನ್ನು ನೇಮಿಸಿ ವಾಕಿ-ಟಾಕಿ ಮೂಲಕ ಅರಣ್ಯವಲಯ ಹಾಗೂ ವಿಭಾಗ ಕಛೇರಿಗೆ ಮಾಹಿತಿ ರವಾನಿಸುವ ವ್ಯವಸ್ಥೆಯನ್ನು ಸುಸಜ್ಜಿತವಾಗಿಡಬೇಕು, ಅರಣ್ಯದಲ್ಲಿ, ಜೀಪಿನಲ್ಲಿ ಓಡಾಡಲು ಕನಿಷ್ಠ ಕಚ್ಚಾ ರಸ್ತೆಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಸುವ್ಯವಸ್ಥಿತ ವಾಹನಗಳನ್ನು ನೇಮಿಸಿಕೊಂಡು ಬೆಂಕಿ ಕಾವಲುಗಾರರೊಡನೆ ದಿನವಿಡೀ ಅದರಲ್ಲೂ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಕ್ಷಿಪ್ರಗತಿಯಲ್ಲಿ ಗಸ್ತು ತಿರುಗಿ ಬೆಂಕಿ ಬೀಳದಂತೆ ನೋಡಿಕೊಳ್ಳಬೇಕು. ಕಾಡಿನ ಮಧ್ಯದಲ್ಲಿ, ಆಯಕಟ್ಟಿನ ಜಾಗಗಳಲ್ಲಿ ಬೆಂಕಿ ಪ್ರಹಾರ ದಳಗಳ ತಾಣಗಳನ್ನು ಫೆಬ್ರವರಿ ಯಿಂದ ಮೇ ತಿಂಗಳವರೆಗೆ ಹಗಲು ರಾತ್ರಿ ಇರುವಂತೆ ಮಾಡಿ ಬೆಂಕಿ ಬಿದ್ದ ಕೂಡಲೇ ಕನಿಷ್ಠ ಸಮಯದಲ್ಲಿ ಅಲ್ಲಿಗೆ ತಲುಪುವಂತೆ ವ್ಯವಸ್ಥೆ ಮಾಡಿಕೊಂಡಿರಬೇಕು. ಅರಣ್ಯಾಧಿಕಾರಿಗಳು ಸ್ಥಳೀಯ ಜನರೊಡನೆ ನಿಕಟ ನಿರಂತರ ಸಂಪರ್ಕವನ್ನಿಟ್ಟುಕೊಂಡು ಅರಣ್ಯ ಮಾಹಿತಿ ಜಾಲವನ್ನು ರೂಪಿಸಿಕೊಂಡು ಬೆಂಕಿ ಬಗ್ಗೆ, ಕಾಡಿಗೆ ಬೆಂಕಿ ಹಾಕುವವರ ಮತ್ತು ಬೆಂಕಿ ಬಿಡುವವರ ಬಗ್ಗೆ ನಿಗಾ ವಹಿಸಬೇಕು. ಮಾಹಿತಿದಾರರಿಗೆ ಸೂಕ್ತ ಬಹುಮಾನಗಳನ್ನು ನೀಡಬೇಕು.

**3. ಕಾಡ್ಗಿಚ್ಚಿನೊಡನೆ ಹೋರಾಟ ಮತ್ತು ನಂದಿಸುವುದು**

ಬೆಂಕಿ ಬೀಳದ ಹಾಗೆ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವುದು ಅತ್ಯುತ್ತಮ ನಿರ್ವಹಣೆ, ಬೆಂಕಿಯನ್ನು ಪ್ರಾರಂಭದಲ್ಲೇ ಪತ್ತೆ ಹಚ್ಚಿ ಹರಡದಂತೆ ನಂದಿಸುವುದು ಉತ್ತಮ ಕೆಲಸ. ಆದರೆ ಒಮ್ಮೊಮ್ಮೆ ಕೈಮೀರಿ ನೆಲದ ಮೇಲ್ಸ್ತರ ಬೆಂಕಿ ಕಾಡ್ಗಿಚ್ಚಾಗಿ ವಿರಾಟ ರೂಪ ಪಡೆದು ಅರಣ್ಯಗಳು ಮತ್ತು ವನ್ಯ ಜೀವಿಗಳನ್ನು ದಹಿಸುತ್ತದೆ. ಕಾಡ್ಗಿಚ್ಚಿನೊಡನೆ ಹೋರಾಟ ಬಹಳ ಅಪಾಯಕಾರಿ. ಸುಳಿವು ಸಿಕ್ಕ ಕೂಡಲೇ ಕ್ಷಿಪ್ರಗತಿಯಲ್ಲಿ ಕಾರ್ಯಾಚರಣೆಗೊಳ್ಳಬೇಕು. ನಿಮಿಷಗಳು ತಡವಾದರೂ ಅನಾಹುತ ವಿಪರೀತ. ಕಾಡ್ಗಿಚ್ಚನ್ನು ನಂದಿಸಲು ಕೆಳಗಿನವುಗಳು ಬಹಳ ಮುಖ್ಯ:

(1) ನುರಿತ, ತರಬೇತಿ ಹೊಂದಿದ ಬುಡಕಟ್ಟು ಜನರು, ಸ್ಥಳೀಯರು ಹಾಗೂ ಸಿಬ್ಬಂದಿಗಳು ಸಾಕಷ್ಟು ಸಂಖ್ಯೆಯಲ್ಲಿ ಸಿದ್ದರಾಗಿರಬೇಕು. (2) ಶೀಘ್ರಗತಿಯಲ್ಲಿ ಕಾಡ್ಗಿಚ್ಚಿನ ಸ್ಥಳಕ್ಕೆ ಪ್ರಯಾಣಿಸಬೇಕು. (3) ಇದಕ್ಕಾಗಿ ವಾಹನಗಳು ಸುಸ್ಥಿತಿಯಲ್ಲಿರಬೇಕು. (4) ಬೆಂಕಿ ನಂದಿಸುವ ಉಪಕರಣಗಳಾದ ಸಾಕಷ್ಟು ಕೊಡಲಿ, ಮಚ್ಚುಗಳು, ಗುದ್ದಲಿ, ಹಾರೆ, ಪಿಕಾಸಿ, ಬೆಂಕಿ ರೇಕ್‌ಗಳು ಇತ್ಯಾದಿಗಳನ್ನು ಒಯ್ಯಬೇಕು. (5) ಅರಣ್ಯ ಪ್ರದೇಶದ ಮೇಲೆ ಲಕ್ಷಣ, ಬೆಂಕಿ ಪಟ್ಟಿಗಳು ಇತ್ಯಾದಿಗಳ ಪರಿಚಯವಿರುವ, ಬೆಂಕಿ ನಂದಿಸಲು ಅನುಭವವಿರುವ ಸಿಬ್ಬಂದಿ ಹಾಗೂ ಸ್ಥಳೀಯರು ಇರಬೇಕು. (6) ಕುಡಿಯುವ ನೀರು ಸಾಕಷ್ಟು ಇರಬೇಕು. ಜೊತೆಗೆ ಸೂಕ್ತ ಆಹಾರ ಇರಬೇಕು. (7) ಪ್ರಥಮ ಚಿಕಿತ್ಸೆ ಕಿಟ್ ಹಾಗೂ ಆಮ್ಲಜನಕ ಸಿಲಿಂಡರ್‌ಗಳು ಇರಬೇಕು. (8) ನೀರಿನ ಟ್ಯಾಂಕರುಗಳು ಇರಬೇಕು. ಸಾಧ್ಯವಾದಲ್ಲಿ ಸರ್ಕಾರದ ಬೆಂಕಿ ನಂದಿಸುವ ಸಿಬ್ಬಂದಿ ಹಾಗೂ ಅಗ್ನಿಶಾಮಕ ವಾಹನಗಳನ್ನು ಉಪಯೋಗಿಸಿಕೊಳ್ಳಬೇಕು. (9) ಬೆಂಕಿಯೊಡನೆ ಕಾದಾಡುವ ಜನರು ಬೆಂಕಿ ನಿರೋಧಕ ವಸ್ತ್ರಗಳನ್ನು ಹಾಗೂ ತಲೆಗೆ ಶಿರಸ್ತ್ರಾಣವನ್ನು ಧರಿಸಿರತಕ್ಕದ್ದು. (10) ಆಂಬ್ಯುಲೆನ್ಸ್ ವಾಹನ ತುರ್ತು ಚಿಕಿತ್ಸೆಗಾಗಿ ವೈದ್ಯರು ಹಾಗೂ ಅವರ ಸಿಬ್ಬಂದಿಗಳು ಹತ್ತಿರದ ಈ ಆಸ್ಪತ್ರೆಗಳಲ್ಲಿ ಸಿದ್ಧರಿರಬೇಕಾಗುತ್ತದೆ.

ಮೇಲೆ ಬೆಂಕಿಯನ್ನು ಗಿಡ ಮರಗಳ ರೆಂಬೆಗಳ ಸೊಪ್ಪಿನ ಗೊಂಚಲಿನಿಂದ ಬಡಿದು ನಂದಿಸುವುದು ಬಹಳ ಪುರಾತನ ಪದ್ಧತಿ. ಆದರೂ ಇದು ಉತ್ತಮ. ನಂತರ ಬೆಂಕಿ ಮುಂದೆ ಹರಡದಂತೆ ಒಣಗಿದ ಹುಲ್ಲು ಗಿಡಗಂಟಿಗಳನ್ನು ಸ್ವಚ್ಛ ಮಾಡಿ ಬೆಂಕಿ ಪಟ್ಟಿ ಮಾಡುವುದು. ಬೆಂಕಿಯ ಮೇಲೆ ಮಣ್ಣನ್ನು ಎರಚಿ ಆಮ್ಲಜನಕ ಹಾಗೂ ಉರಿಯಲು ಪದಾರ್ಥಗಳು ಸಿಗದಂತೆ ಮಾಡುವುದು. ಬೆಂಕಿ ಪಟ್ಟಿಗಳು, ರಸ್ತೆಗಳು, ಹಳ್ಳಗಳು ಇರುವ ಜಾಗದಿಂದ ಬೆಂಕಿ ಬರುತ್ತಿರುವ ದಿಕ್ಕಿಗೆ ಬೆಂಕಿ (ಕೌಂಟರ್ ಫೈರ್) ಅಥವಾ ಹಿನ್ನುರಿ (ಬ್ಯಾಕ್ ಫೈರ್) ಹಾಕಿ ಹರಿದು ಬರುತ್ತಿರುವ ಬೆಂಕಿಯ ರಭಸವನ್ನು ತಡೆದು ನಿಲ್ಲಿಸಿ ನಂದಿಸುವುದು. ಕೌಂಟರ್ ಫೈರ್ ಹಾಕುವಾಗ ಬಹಳ ಎಚ್ಚರಿಕೆಯಿಂದ ಮೇಲ್ವಿಚಾರಣೆ ಮಾಡಬೇಕು. ಗಾಳಿಯ ವೇಗ ಹಾಗೂ ದಿಕ್ಕುಗಳನ್ನು ನೋಡಿ ಕಾಡ್ಗಿಚ್ಚಿನ ದಿಕ್ಕಿನ ಕಡೆಗೆ ಬೆಂಕಿ ಹೋಗುವಂತೆ ಬಿಡಬೇಕು. ಅತಿ ಇಳಿಜಾರಾದ ಪರ್ವತ ಪ್ರದೇಶಗಳಲ್ಲಿ ಕಾಡ್ಗಿಚ್ಚು ನಂದಿಸುವುದು ಬಹಳ ಕಷ್ಟ. ಕೆನಡಾ, ಜರ್ಮನಿಗಳಲ್ಲಿರುವಂತೆ ವಿಮಾನಗಳನ್ನು ಬಳಸಿ, ಬೆಂಕಿ ಪತ್ತೆ ಹಚ್ಚಿ ನಂದಿಸುವ ಪದ್ಧತಿ ಭಾರತದಲ್ಲಿ ಇನ್ನೂ ಬರಬೇಕಿದೆ.

**4. ಅರಣ್ಯ ಬೆಂಕಿ ಮತ್ತು ಕಾನೂನುಗಳು**

ಭಾರತ ಸಂವಿಧಾನದ ಅನುಚ್ಛೇದ 51ಎ ಪ್ರಕಾರ ಅರಣ್ಯಗಳನ್ನು ಹಾಗೂ ವನ್ಯ ಪ್ರಾಣಿಗಳನ್ನು ಮತ್ತು ಜಲಮೂಲಗಳನ್ನು ರಕ್ಷಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ಕರ್ನಾಟಕ ಅರಣ್ಯಗಳಲ್ಲಿ ಬೆಂಕಿ ಹಚ್ಚುವುದು, ದೊಂಬಿಗಳನ್ನು ಕೊಂಡೊಯ್ಯುವುದು ಧೂಮಪಾನ ಇತ್ಯಾದಿಗಳು ನಿಷೇಧ. ಮೀಸಲು ಅರಣ್ಯ ಅಥವಾ ಸುರಕ್ಷಿತ ಅರಣ್ಯ ಅಥವಾ ಜಿಲ್ಲಾ ಅರಣ್ಯಕ್ಕೆ ಲಗತ್ತಾದ ಭೂಮಿಗಳಲ್ಲಿ ಹತ್ತಿ ಉರಿಯುವ ವಸ್ತುಗಳಾದ ಯಾವುದೇ ಕಟ್ಟಿಗೆ, ಹುಲ್ಲು, ಕಳೆ, ಬಿದಿರು ಇತ್ಯಾದಿ ವಸ್ತುಗಳನ್ನು ಸಂಗ್ರಹಿಸತಕ್ಕದ್ದಲ್ಲ. ಅರಣ್ಯ ಸರಹದ್ದಿನಿಂದ 15 ಕಿ.ಮೀ ಒಳಗೆ ಬೆಂಕಿ ಹೊತ್ತಿಸಲು ಇಚ್ಛಿಸುವ ವ್ಯಕ್ತಿಯು ಬೆಂಕಿ ಸುತ್ತಮುತ್ತಲ ಪ್ರದೇಶಕ್ಕೆ ಹಚ್ಚದಂತೆ ಅಥವಾ ಅರಣ್ಯಕ್ಕೆ ಹಾನಿ ಉಂಟುಮಾಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ಅರಣ್ಯ ಸರಹದ್ದಿನ 180 ಮೀಟರ್ ಒಳಗೆ ವಲಯಾರಣ್ಯಾಧಿಕಾರಿಯ ದರ್ಜೆಗಿಂತ ಕಡಿಮೆ ದರ್ಜೆಯಲ್ಲದ ಒಬ್ಬ ಅಧಿಕಾರಿಯ ಪೂರ್ವಾನುಮತಿಯಿಲ್ಲದೆ ಯಾವುದೇ ಬೆಂಕಿಯನ್ನು ಹೊತ್ತಿಸತಕ್ಕುದಲ್ಲ. ಈ ನಿಬಂಧನೆಗಳು ಜುಲೈ ಪ್ರಾರಂಭದಿಂದ ಅಕ್ಟೋಬರ್ ಕೊನೆಯವರೆಗೆ ಜಾರಿಯಲ್ಲಿರುವುದಿಲ್ಲ. ಇವುಗಳನ್ನು ಉಲ್ಲಂಘಿಸಿದರೆ ಅಥವಾ ಪ್ರೇರೇಪಿಸಿದರೆ, ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯವರೆಗೂ ಕಾರಾಗೃಹವಾಸದಿಂದ ಎರಡು ಸಾವಿರ ರೂಪಾಯಿಗಳವರೆಗೂ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗುತ್ತಾನೆ. ಮತ್ತು ಅಪರಾಧ ನಿರ್ಣಯ ಮಾಡುವ ನ್ಯಾಯಾಲಯವು ಅರಣ್ಯಗಳಿಗೆ ಉಂಟಾದ ಹಾನಿ ಬಗ್ಗೆ ಸಂದಾಯ ಮಾಡಲು ನಿರ್ದೇಶಿಸಬಹುದಾದಂಥ ಪರಿಹಾರವನ್ನು ಸಂದಾಯ ಮಾಡುವುದಕ್ಕೂ ಹೊಣೆಯಾಗಿರತಕ್ಕದ್ದು.

ವನ್ಯಜೀವಿ (ರಕ್ಷಣಾ) ಅಧಿನಿಯಮ 1972ರ ಪ್ರಕಾರ ರಾಷ್ಟ್ರೀಯ ಉದ್ಯಾನ ಅಥವಾ ಅಭಯಾರಣ್ಯಗಳಲ್ಲಿ ಯಾವುದೇ ವ್ಯಕ್ತಿ ಬೆಂಕಿ ಹಚ್ಚುವುದು ದಂಡನೀಯ ಅಪರಾಧ. ಇಂತಹ ಅಪರಾಧಗಳು ನಿರ್ಣಯವಾದ ಮೇಲೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಅಥವಾ 25 ಸಾವಿರ ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು. ಅರಣ್ಯಾಧಿಕಾರಿಗಳು ಈ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಆದ್ದರಿಂದ ಅರಣ್ಯಗಳಿಗೆ ಮತ್ತು ವನ್ಯಜೀವಿ ಧಾಮಗಳಿಗೆ ಬೆಂಕಿ ಹಚ್ಚಬಾರದು. ಹಚ್ಚಿದಲ್ಲಿ ಅಥವಾ ಪ್ರಯತ್ನಪಟ್ಟಿದ್ದೇ ಆದಲ್ಲಿ ಅಥವಾ ಬೇರೆಯವರನ್ನು ಪ್ರೇರೇಪಿಸಿದರೂ ಜೈಲುವಾಸ ಖಚಿತ.

ಸಕಲ ಜೀವಜಂತುಗಳಿಗೆ ವಿಶೇಷವಾಗಿ ಮಾನವಕುಲ ಬದುಕಿ ಬಾಳಲು ಅರಣ್ಯಗಳು ಬಹಳ ಮುಖ್ಯ. ನಾಗರಿಕತೆ ಪ್ರಾರಂಭವಾದದ್ದೇ ನದಿ ತೀರಗಳಲ್ಲಿ. ಅರಣ್ಯಗಳೇ ನದಿಗಳ ಮೂಲ. ಪರಿಸರದ ಪ್ರಮುಖ ಅಂಗಾಂಗಗಳಾದ ಗಾಳಿ, ನೀರು, ಸಸ್ಯವರ್ಗ ಮತ್ತು ಪ್ರಾಣಿವರ್ಗ ಸಮತೋಲನವಾಗಿ ಇರಬೇಕಾದರೆ, ಅರಣ್ಯಗಳ ಪಾತ್ರ ಬಹಳ ಮಹತ್ವದ್ದು. ಕಾಡ್ಗಿಚ್ಚಿನಿಂದಾಗಿ ಅರಣ್ಯಗಳು ಅವನತಿ ಹೊಂದಿ ಜೀವ ವೈವಿಧ್ಯತೆ ಕ್ಷೀಣಿಸುತ್ತದೆ. ಬದುಕಲು ಇರುವುದೊಂದೇ ಭೂಮಿ. ಬನ್ನಿ ಎಲ್ಲರೂ ಕೈ ಜೋಡಿಸಿ ಅರಣ್ಯಗಳಿಗೆ ಬೆಂಕಿ ಬೀಳದಂತೆ ಮುನ್ನೆಚ್ಚರಿಕೆ ವಹಿಸಿ ವನ್ಯ ಸಿರಿಯು ನಿರಂತರವಾಗಿ ನಗುನಗುತ್ತಾ ನಳನಳಿಸುವಂತೆ ಇರಲು ಪ್ರತಿಜ್ಞೆ ಮಾಡೋಣ ಹಾಗೂ ಅದರಂತೆ ನಡೆದುಕೊಳ್ಳೋಣ.

# ಪ್ರಮುಖ ದಿನಗಳು ಮತ್ತು ಧ್ಯೇಯವಾಕ್ಯ


1. 4ನೇ ಫೆಬ್ರವರಿ 2022–ವಿಶ್ವ ಜೌಗು ಭೂಮಿ ದಿನ
   Wetlands Action for People and Nature
2. 3ನೇ ಮಾರ್ಚ್ 2022–ವಿಶ್ವ ವನ್ಯಜೀವಿ ದಿನ
   Recovering key species for ecosystem restoration
3. 20 ಮಾರ್ಚ್ 2022 –ವಿಶ್ವ ಗುಬ್ಬಚ್ಚಿ ದಿನ
   Monitor the Sparrows and other common birds
4. 21 ಮಾರ್ಚ್ 2022–ವಿಶ್ವ ಅರಣ್ಯ ದಿನ
   Forests and sustainable Production and consumption
5. 22 ಮಾರ್ಚ್ 2022–ವಿಶ್ವ ಜಲ ದಿನ
   Ground water, making the invisible visible
6. 23 ಮಾರ್ಚ್ 2022–ವಿಶ್ವ ಹವಾಮಾನ ದಿನ
   Early warning and early action



## The best message

This is a drop of water on a leaf and 12 ants are drinking water from it. The amazing thing is how they have divided into 4 groups of 3 ants each to balance the leaf so that the water drop would not slide off. Small wonders of nature never cease to amaze. This is the type of coordination we need amongst people

ಜಾಹೀರಾತು



Visit Agumbe

**Guddekeri Homestay**

***Guddekeri Post,
Thirthahalli Taluk,
Shimoga Dist.
Pin code - 577411***

***Mob: +91 9844737273
Website:
www.guddekerihomestay.com
Like us on Facebook:
fb.me/guddekerihomestay***

***Follow us on Instagram:
@guddekeri_homestay***



# ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ.)

## ನೂತನ ಆಡಳಿತ ಮಂಡಳಿ

ದಿ: 19–12–2021ರಂದು ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣ, ಯುಎಎಸ್ ಬೆಂಗಳೂರು, ಪಶುವೈದ್ಯಕೀಯ ಕಾಲೇಜು ಆವರಣ ಹೆಬ್ಬಾಳ ಇಲ್ಲಿ ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ 2021–24ರ ಅವಧಿಗೆ ನಡೆದ ಚುನಾವಣೆಯಲ್ಲಿ 13 ಮಂದಿ ನೂತನ ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾಗಿದ್ದಾರೆ.

ಡಾ. ಕೆ.ಹೆಚ್. ವಿನಯ್ ಕುಮಾರ್ ಭಾ.ಅ.ಸೇ.(ನಿ.) ಇವರು ಚುನಾವಣಾಧಿಕಾರಿಯಾಗಿ ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ನಡೆಸಿಕೊಟ್ಟರು.



ಶ್ರೀ ಅಜಯ್ ಮಿಶ್ರ
ಅಧ್ಯಕ್ಷರು
ಮೊ: 94498 63876



ಡಾ. ಎಸ್.ಸಿ.ವಿ. ರೆಡ್ಡಿ
ಸಹ ಅಧ್ಯಕ್ಷರು
ಮೊ: 98806 46274



ಡಾ. ಎಸ್. ರಾಜೇಂದ್ರ ಪ್ರಸಾದ್
ಉಪಾಧ್ಯಕ್ಷರು
ಮೊ: 94528 83308



ಶ್ರೀ ಹೆಚ್.ಜಿ. ಶಿವಾನಂದಮೂರ್ತಿ
ಕಾರ್ಯದರ್ಶಿ
ಮೊ: 94481 26246



ಶ್ರೀ ಎ. ಅಶ್ವಥಯ್ಯ
ಜಂಟಿ ಕಾರ್ಯದರ್ಶಿ
ಮೊ: 94481 85009



ಶ್ರೀ ಗುರುಮೂರ್ತಿ
ಖಜಾಂಚಿ
ಮೊ: 99457 54650



ಡಾ. ಎ.ಬಿ. ಪಾಟೀಲ್
ಸದಸ್ಯರು
ಮೊ: 97401 82990



ಶ್ರೀ ಸಿದ್ದಲಿಂಗಪ್ಪ
ಸದಸ್ಯರು
ಮೊ: 99005 39499



ಶ್ರೀ ಎಂ.ಸಿ. ರಂಗಸ್ವಾಮಿ
ಸದಸ್ಯರು
ಮೊ: 99801 26555



ಶ್ರೀ ಎನ್. ಶಿವರಾಜು
ಸದಸ್ಯರು
ಮೊ: 94826 47448



ಶ್ರೀ ಆರ್. ಆಂಜನೇಯ ರೆಡ್ಡಿ
ಸದಸ್ಯರು
ಮೊ: 93438 70009



ಶ್ರೀ ಮಲ್ಲೇಶ್ ಲಿಂಗಾಚಾರ್
ಸದಸ್ಯರು
ಮೊ: 78999 10288



ಶ್ರೀ ಬಿ.ಪಿ. ಹನುಮಂತರಾಯಪ್ಪ
ಸದಸ್ಯರು
ಮೊ: 94494 56824
















ವಿಳಾಸ: ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ), ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು -560003
ದೂ: 080 23566126 Email: iaftbangalore@gmail.com, website: www.iaft.co.in